بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 04

ಸಂಚಿಕೆ: 38

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

21 ಸೆಪ್ಟೆಂಬರ್ 2023, 21 ತಬೂಕ್ 1402 ಹಿಜರಿ ಶಮ್ಸಿ,
05 ರಬೀಉಲ್ ಅವ್ವಲ್ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمْرِهٖ وَاَمْرِهٖ

## ಅಲ್ಲಾಹನ ಉಪದೇಶ

وَلَقَدْ صَرَّفْنَا لِلنَّاسِ
فِيْ هٰذَا الْقُرْاٰنِ مِنْ كُلِّ مَثَلٍ
فَاَبٰۤى اَكْثَرُ النَّاسِ اِلَّا كُفُوْرًا

**(ಬನೀ ಇಸ್ರಾಈಲ್: 90)**

**ಅಂದರೆ: ಮನುಷ್ಯರಿಗೋಸ್ಕರ ಈ ಖುರ್‌ಆನಿನಲ್ಲಿ ಎಲ್ಲ ಉಪಮೆಗಳನ್ನೂ ಹಲವು ವಿಧದಲ್ಲಿ ನಾವು ವಿವರಿಸಿದ್ದೇವೆ. ಆದರೆ ಮನುಷ್ಯರಲ್ಲಿ ಹೆಚ್ಚಿನವರು ಅವಿಶ್ವಾಸವನ್ನು ಹೊರತು ಬೇರೆಲ್ಲವನ್ನೂ ತಿರಸ್ಕರಿಸುತ್ತಾರೆ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**2388)** ಹಝ್ರತ್ ಅಬೂದ್ದರ್(ರ) ವರದಿ ಮಾಡುತ್ತಾರೆ. ನಾನು ನಬಿ(ಸ) ರವರ ಜೊತೆಯಲ್ಲಿದ್ದೆ. ಆಗ ಅವರು (ಸ) ಉಹದ್ ಪರ್ವತವನ್ನು ನೋಡಿ ಹೇಳಿದರು. ಈ ಪರ್ವತ ನನಗಾಗಿ ಚಿನ್ನದಲ್ಲಿ ಮಾರ್ಪಡಿಸಿ ಕೊಟ್ಟರೆ ಅದು ನನಗೆ ಇಷ್ಟವಿಲ್ಲ, ಅದರಲ್ಲಿನ ಒಂದು ದೀನಾರು ಸಹ ನನ್ನ ಬಳಿ ಮೂರು ದಿನಗಳಿಗಿಂತ ಹೆಚ್ಚು ಇರಿಸಿಕೊಳ್ಳಲು ಬಯಸುವುದಿಲ್ಲ. ಸಾಲ ತೀರಿಸುವ ಕಾರಣವಿದ್ದರೆ ಹೊರತುಪಡಿಸಿ, ಮತ್ತು ಅವರು(ಸ) ಹೇಳಿದರು. ಒಬ್ಬನು ಎಷ್ಟು ಶ್ರೀಮಂತನಾಗುವನು, ಅವನು ಅಷ್ಟೇ ಹೆಚ್ಚು ಅಗತ್ಯವುಳ್ಳವನಾಗಿರುತ್ತಾನೆ. ತನ್ನ ಸಂಪತ್ತನ್ನು ಖರ್ಚು ಮಾಡುವವನ ವ್ಯಕ್ತಿಯ ಹೊರತುಪಡಿಸಿ **ಇನ್ನಲ್ ಅಕ್ಸರೀನ ಹುಮುಲ್ ಅಖಲ್ಲೂನ್**: ಹಝ್ರತ್ ಸಯ್ಯದ್ ಝೈನು ಆಬಿದೀನ್ ವಲಿಯುಲ್ಲಾಹ್ ಶಾಹ್ ಸಾಹಿಬ್ ಹೇಳುತ್ತಾರೆ. ಈ ವಾಕ್ಯ ಜವಾಮೆಉಲ್ ಕಲಮ್‌ನಿಂದ ಆರಿಸಿಕೊಂಡದ್ದಾಗಿದೆ ಅದರ ಭಾವ ಹೀಗಿದೆ. ಹಣ ಕೂಡಿಸುವುದು ಶ್ರೀಮಂತಿಕೆ ಅಲ್ಲ ಬದಲು ಶ್ರೀಮಂತರ ಪೈಕಿ ಹೆಚ್ಚಿನವರು ನೈತಿಕತೆ ಯಿಂದ ವಂಚಿತರಾಗಿರುವ ಕಾರಣ ಬಡವರಾಗಿಯೇ ಉಳಿದುಕೊಳ್ಳುತ್ತಾರೆ. ಶ್ರೀಮಂತಿಕೆ ಸಂಪತ್ತು ಕೂಡಿರುವುದರಲ್ಲಿ ಇಲ್ಲ. ಬದಲು ಎಡ ಬಲ ಖರ್ಚು ಮಾಡುವುದರಲ್ಲಿದೆ. ಎಂದರೆ ಧಾರ್ಮಿಕ ಹಾಗೂ ಲೌಕಿಕ ಕಾರಣಗಳಿಗೆ ಖರ್ಚು ಮಾಡುವುದರಿಂದ ಸಂಪತ್ತಿನ ಉದ್ದೇಶ ಪೂರ್ತಿಯಾಗುತ್ತದೆ. ವ್ಯಕ್ತಿಯೊಬ್ಬನು ಹಣ ಸಂಗ್ರಹಿಸಿ ಇಟ್ಟು, ಹಕ್ಕುಗಳನ್ನು ಪಾಲಿಸದಿದ್ದರೆ, ಅವನೇ ಎಲ್ಲರಿಗಿಂತ ಹೆಚ್ಚು ಬಡವನಾಗಿರುವನು. ಆದರೆ ಯಾವ ವ್ಯಕ್ತಿ ತನ್ನ ಸಂಪತ್ತಿನಿಂದ ಹಕ್ಕುಗಳನ್ನು ಪಾಲಿಸುತ್ತಾನೆ ಅವನೇ ಹೆಚ್ಚು ಶ್ರೀಮಂತ, ಅವನು ಸಂಪತ್ತಿನ ಉದ್ದೇಶ ಪೂರ್ಣಗೊಳಿಸಿರುವವನು. ಹಝ್ರತ್ ಪೈಗಂಬರ್(ಸ) ರವರ ಸಂಪತ್ತಿನ ಕುರಿತ ಅಭಿಪ್ರಾಯ ಎಷ್ಟೊಂದು ಸಮಂಜಸ ಮತ್ತು ಜ್ಞಾನಪೂರ್ಣವಾಗಿತ್ತೆಂದರೆ ಅದು ಅವರ ಪರಿಶುದ್ಧ ಗುಣ, ಅವರ ಈ ನುಡಿಯಿಂದ ಸ್ಪಷ್ಟವಾಗುತ್ತದೆ. ಉಹದ್ ಪರ್ವತದಷ್ಟು ಚಿನ್ನವು ನನ್ನ ಬಳಿಯಿದ್ದರೆ ಹಕ್ಕುಗಳ ಪೂರ್ತಿಯಲ್ಲಿ ಅದೆಲ್ಲ ಖರ್ಚು ಆಗುವವರೆಗೂ ನನಗೆ ಸಂತೋಷವಿರುವುದಿಲ್ಲ. **(ಸಹೀಹ್ ಬುಖಾರಿ, ಸಂಪುಟ-4, ಮುದ್ರಣ 2008 ಖಾದಿಯಾನ್)**

ಯಾರು ಇತರರಿಗೆ ಪ್ರಯೋಜನವನ್ನುಂಟು ಮಾಡುತ್ತಾರೆ ಮತ್ತು ಉಪಯುಕ್ತ ಜೀವಿಗಳಾಗುತ್ತಾರೆ. ಅವರು ದೀರ್ಘಾಯುಷ್ಯವನ್ನು ಹೊಂದಿರುತ್ತಾರೆ.

ಲೋಕದಲ್ಲಿ ಯಾರು ಹಿತೋಪಕಾರಿಯಾಗಿ ಬಾಳುತ್ತಾರೆ. ಅವರ ಆಯುಷ್ಯ ದೀರ್ಘವಾಗುತ್ತದೆ ಮತ್ತು ಯಾರು ಇತರರ ಕೆಟ್ಟದನ್ನು ಬಯಸುತ್ತಾರೆ ಅವರನ್ನು ತ್ವರಿತವಾಗಿ ತೆಗೆದುಹಾಕಲಾಗುತ್ತದೆ. ಎಂಬುದು ಅತ್ಯಂತ ಸತ್ಯವಾದ ಮಾತಾಗಿದೆ.

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ದೀರ್ಘಾಯುಷ್ಯಕ್ಕಾಗಿ ಒಂದು ಪಾಕವಿಧಾನ

ಇತರರಿಗಾಗಿ ಪ್ರಾರ್ಥಿಸುವ ಇನ್ನೊಂದು ದೊಡ್ಡ ಪ್ರಯೋಜನವೆಂದರೆ ದೀರ್ಘಾಯುಷ್ಯವಾಗುತ್ತದೆ. ಇತರರಿಗೆ ಉಪಕಾರ ಮಾಡುವ ಮತ್ತು ಉಪಯುಕ್ತ ಜೀವಿಗಳಾಗಿರುವವರು ದೀರ್ಘಾಯುಷ್ಯವನ್ನು ಹೊಂದಿರುತ್ತಾರೆ ಎಂದು ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ವಾಗ್ದಾನ ಮಾಡಿದ್ದಾನೆ. ಅಲ್ಲಾಹನು ನುಡಿದಂತೆ: **ವ ಅಮ್ಮಾ ಮಾ ಯನ್‌ಫುನ್ನಾಸ ಫ ಯಮ್‌ಕುಸು ಫಿಲ್ ಅರ್ಝಿ** (ಅರ್ರಅ್‌ದ್:18) ಮತ್ತು ಇತರ ರೀತಿಯ ಸಹಾನುಭೂತಿಗಳು ಸೀಮಿತವಾಗಿವೆ, ಆದುದರಿಂದ ವಿಶಿಷ್ಟ ರೂಪದಲ್ಲಿ ಜಾರಿ ಇರುವಂತಹ ಸಹಾನುಭೂತಿ ಎಂದರೆ ಅದು ಪ್ರಾರ್ಥನೆ ಮಾತ್ರ. ಒಳಿತಿನ ಪ್ರಯೋಜನವು ಹೇರಳವಾಗಿದ್ದರೂ, ಈ ವಚನದ ಪ್ರಯೋಜನವು ನಾವು ಪ್ರಾರ್ಥನೆಯೊಂದಿಗೆ ಪಡೆಯಬಹುದಾಗಿದೆ. ಇದು ಅತ್ಯಂತ ಸತ್ಯವಾದ ಮಾತಾಗಿದೆ. ಅಂದರೆ ಲೋಕದಲ್ಲಿ ಯಾರು ಹಿತೋಪಕಾರಿಯಾಗಿ ಬಾಳುತ್ತಾರೆ ಅವರ ಆಯುಷ್ಯ ದೀರ್ಘವಾಗುತ್ತದೆ. ಯಾರು ಇತರರಿಗೆ ಕೆಡುಕನ್ನು ಬಯಸುತ್ತಾರೆ ಅವರನ್ನು ತ್ವರಿತವಾಗಿ ತೆಗೆದುಹಾಕಲಾಗುತ್ತದೆ. ಹೇಳಲಾಗುತ್ತದೆ. ಶೇರ್‌ಸಿಂಗ್ ಎಂಬುವನು ಗುಬ್ಬಚಿಗಳನ್ನು ಹಿಡಿದು ಜೀವಂತವಾಗಿ ಅಗ್ನಿಯ ಮೇಲೆ ಇಡುತ್ತಿದ್ದನು. ಅವನು ಎರಡು ವರ್ಷ ಒಳಗೆಯೇ ಸತ್ತು ಹೋದನು. ಆದ್ದರಿಂದ ಮನುಷ್ಯನು- **ಖೈರುನ್ನಾಸಿ ಮೈಂ ಯನ್‌ಫ ಉನ್ನಾಸ್** ಒಳ್ಳೆಯ ವ್ಯಕ್ತಿಯಾಗಲು ಚಿಂತನೆ ಮತ್ತು ಅಧ್ಯಯನವನ್ನು ಮುಂದುವರಿಸುವುದು ಅವಶ್ಯಕವಾಗಿದೆ. ಯಾವ ರೀತಿ ಚಿಕಿತ್ಸೆಯಲ್ಲಿ ನೆವಗಳು ಕೆಲಸ ಮಾಡುತ್ತದೆಯೋ ಅದೇ ರೀತಿ ಜನರಿಗೆ ಒಳಿತನ್ನುಂಟು ಮಾಡುವುದು ಕೆಲಸಕ್ಕೆ ಬರುತ್ತದೆ. ಆದ್ದರಿಂದ ಮನುಷ್ಯನಿಗೆ ಅನಿವಾರ್ಯವಾಗಿದೆ, ಯಾವಾಗಲೂ ಯಾವ ರೀತಿ ಇನ್ನೊಬ್ಬರಿಗೆ ಹಿತವನ್ನುಂಟು ಮಾಡಬೇಕು ಎಂಬ ಚಿಂತನೆಯಲ್ಲಿರಬೇಕಾಗಿದೆ.

**(ಮಲ್‌ಫೂಝಾತ್, ಸಂಪುಟ-1, ಪುಟ-480, 2018 ಮುದ್ರಣ ಖಾದಿಯಾನ್)**

ಕೇಳುವ ಹಕ್ಕಿಲ್ಲದ ಪೈಕಿಯ ಮಾತು ಕೇಳಿದರೆ ಅದನ್ನು ಪ್ರಶ್ನಿಸಲಾಗುತ್ತದೆ. ತನಗೆ ಹಕ್ಕಿಲ್ಲದ ಇನ್ನೊಬ್ಬರ ನೋಟ ನೋಡಿದರೆ ಅದನ್ನು ಕೂಡ ಪ್ರಶ್ನಿಸಲಾಗುತ್ತದೆ. ತನಗೆ ಹಕ್ಕಿಲ್ಲದೆ ಆಲೋಚನೆಗಳು ಮನದಲ್ಲಿಟ್ಟುಕೊಂಡರೆ ಅದನ್ನು ಕೂಡ ಪ್ರಶ್ನಿಸಲಾಗುತ್ತದೆ.

ಸಯ್ಯದನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಬನೀಈಸ್ರಾಯಿಲ್‌ನ ವಚನ 39 **ವಲಾ ತಖ್‌ಫು ಮಾ ಲೈಸಲಕ ಬಿಹೀ ಇಲ್‌ಮುನ್; ಇನ್ನಸ್ಸಮ್‌ಅ ವಲ್ ಬಸರ ವಲ್ ಫುಆದ ಕುಲ್ಲು ಉಲಾಯಿಕ ಕಾನ ಅನ್‌ಹು ಮಸ್‌ಊಲ**. ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ.

ಇದರ ಅರ್ಥ ಯಾವುದೇ ಹೊಸ ರೀತಿಯ ಜ್ಞಾನ ಪಡೆಯಬೇಡಿರಿ ಎಂದಲ್ಲ, ಹೊಸ ಹೊಸ ಅವಿಷ್ಕಾರಗಳನ್ನು ಮಾಡಬೇಡಿರಿ ಎಂದಲ್ಲ. ಬದಲು ಅದರ ಅರ್ಥ ಅನುಮಾನದಿಂದ ದೂರವಿರಿ ಮತ್ತು ತಿಳಿಯದ ಇನ್ನೊಬ್ಬರ ಮೇಲೆ ಆರೋಪ ಹೊರಿಸಬೇಡಿ ಎಂದಾಗಿದೆ. ಆದ್ದರಿಂದ ಇದರ ಮುಂದೆ ಶಂಕೆ ಉದ್ಭವವಾಗುವ ಅಂಗಗಳು ಎಂದರೆ ಕಿವಿ, ಕಣ್ಣು ಮತ್ತು ಹೃದಯಗಳ ಬಗ್ಗೆ ವಿವರಿಸಲಾಗಿದೆ. ಕೆಲ ಸಂದರ್ಭಗಳಲ್ಲಿ ಮನುಷ್ಯನು ಇನ್ನೊಬ್ಬರ ಬಗ್ಗೆ ಮಾತನ್ನು ಕೇಳಿ ನಿರ್ಣಯ ಕೈಗೊಳ್ಳುತ್ತಾನೆ ಮತ್ತು ಏನೂ ಅಸಲು ತಿಳಿಯದೆ ಅವನ ಪೈಕಿ ಹಗೆತನ ಪ್ರಾರಂಭಿಸುತ್ತಾನೆ. ಕೆಲ ಸಂದರ್ಭಗಳಲ್ಲಿ ಒಂದು ದೃಶ್ಯವನ್ನು ಕಂಡು ಅದರ ತಪ್ಪು ಪರಿಣಾಮ ತಡೆಯುವಂತಾಗುತ್ತದೆ. ನಿಜವಾದ ಕಾರಣ ಬೇರೆಯಾಗುವ ಸಾಧ್ಯತೆ ಇರುತ್ತದೆ. ಕೆಲವೊಮ್ಮೆ ಇನ್ನೊಬ್ಬರ ಪೈಕಿ ತನ್ನದೇ ಆದ ರೀತಿಯಲ್ಲಿ ಯೋಚನೆಗಳನ್ನು ಹೊಂದಿರುತ್ತಾನೆ, ಇವೆಲ್ಲ ಮಾತುಗಳಿಂದ ತಡೆಯಲಾಗಿದೆ ಮತ್ತು ಹೇಳಲಾಗಿದೆ. ಅನುಮಾನ ರೀತಿಯ ಮಾತುಗಳಿಂದ

*(ಪುಟ ಸಂಖ್ಯೆ-11 ರಲ್ಲಿ ಮುಂದುವರಿಸಲಾಗಿದೆ)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰه

**"ಮುಜ್‌ಕೋ ಕಾಫಿರ್ ಕಹ್‌ಕೆ ಅಪ್ನೆ ಕುಫ್ರ್ ಪರ್ ಕರ್ತೆ ಹೈಂ ಮುಹರ್ ಎ ತೋ ಹೈ ಸಬ್ ಶಕಲ್ ಉನ್‌ಕೀ ಹಮ್ ತೋ ಹೈಂ ಆಯಿನಾದಾರ್॥"**

ಅನುವಾದ: ನನ್ನನ್ನು ಅವಿಶ್ವಾಸಿ (ಕಾಫಿರ್) ಎಂದು ಘೋಷಿಸಿ ಸ್ವಯಂ ತನ್ನ ಅವಿಶ್ವಾಸವನ್ನು ದೃಢೀಕರಿಸುತ್ತಿದ್ದಾರೆ. ಇವೆಲ್ಲವು ಅವರ ಕಾರಸ್ತಾನವಾಗಿದೆ, ನವು ಕನ್ನಡಿಯಾಗಿದ್ದೇವೆ ಅಷ್ಟೇ.

——————(ಹಝ್ರತ್ ಮಸೀಹ್ ಮೌಊದ್(ಅಲೈಹಿಸ್ಸಲಾಮ್))

## ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಮೇಲೆ "ಮುನ್ಸಿಫ್" ಹೈದರಾಬಾದ್ ಪತ್ರಿಕೆ ಮಾಡಿರುವ ಆಕ್ಷೇಪಣೆಗಳಿಗೆ ಉತ್ತರ.

ಕಳೆದ ಮೂರು ಸಂಚಿಕೆಗಳಲ್ಲಿ, "ಮುನ್ಸಿಫ್" ಹೈದರಾಬಾದ್ ಪತ್ರಿಕೆಯ ಸಂಪಾದಕ, ಅಹ್ಮದಿಯಾ ಜಮಾಅತ್‌ನ ಸಂಸ್ಥಾಪಕ, ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ, ವಾಗ್ದತ್ತ ಮಸೀಹ್ ಮತ್ತು ಮಹದಿ ಅಲೈಹಿಸ್ಸಲಾಮ್ ಅವರ ಮೇಲೆ ಹೂಡಿದ ಆಕ್ಷೇಪಗಳಿಗೆ ನಾವು ಪ್ರತಿಕ್ರಿಯಿಸುತ್ತಿದ್ದೇವೆ. ಆಕ್ಷೇಪಣೆಗಳ ವಿವರಗಳು ಮತ್ತು ಅವುಗಳ ಹಿನ್ನೆಲೆಯನ್ನು ಆಗಸ್ಟ್ 17 ರ ಸಂಚಿಕೆಯಲ್ಲಿ ನೋಡಬಹುದು. ಸೈಯಿದುನಾ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಬ್ರಿಟಿಷರೊಂದಿಗೆ ಸಂಚು ನಡೆಸಿದ್ದರು ಎಂದು "ಮುನ್ಸಿಫ್" ಆಕ್ಷೇಪ ವ್ಯಕ್ತಪಡಿಸಿದೆ. ಈ ಆಕ್ಷೇಪಣೆಯು ಕೇವಲ ಪೊಳ್ಳು, ಸುಳ್ಳು, ಆಧಾರರಹಿತ ಮತ್ತು ಅತ್ಯಂತ ಮೂರ್ಖತನದ ಆಕ್ಷೇಪವಾಗಿದೆ ಎಂದು ನಾವು ವಾದಗಳು ಮತ್ತು ಪುರಾವೆಗಳೊಂದಿಗೆ ಸ್ಪಷ್ಟಪಡಿಸಿದ್ದೇವೆ. ಈಗ ನಾವು ಈ ಆಕ್ಷೇಪಣೆಗೆ ಇನ್ನೊಂದು ಅಂಶದಿಂದ ಉತ್ತರಿಸುತ್ತೇವೆ. ಮಿರ್ಝಾ ಸಾಹಿಬ್ ಬ್ರಿಟಿಷ್ ಸರ್ಕಾರವನ್ನು ಹೊಗಳಿದರು ಮತ್ತು ಬ್ರಿಟಿಷರ ವಿರುದ್ಧ ಜಿಹಾದ್ ಅನ್ನು ನಿಷೇಧಿಸಿದರು ಎಂದು ಹೇಳಲಾಗುತ್ತದೆ.

ಸಯ್ಯಿದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಬ್ರಿಟಿಷ್ ಸರ್ಕಾರವನ್ನು ಹೊಗಳಿದರು ಮತ್ತು ಸರ್ಕಾರದ ವಿರುದ್ಧ ಜಿಹಾದ್ ಹೆಸರಿನಲ್ಲಿ ದಂಗೆ, ಪಿತೂರಿತನ ಮತ್ತು ಹತ್ಯೆಗಳನ್ನು ನಿಷೇಧಿಸಿದರು ಎಂಬುದು ಸಂಪೂರ್ಣವಾಗಿ ನಿಜವಾಗಿದೆ. ಸರ್ವಶಕ್ತನಾದ ಅಲ್ಲಾಹನು ಅವರನ್ನು ಮಸೀಹ್ ಮತ್ತು ಮಹದಿ ಎಂಬ ಶ್ರೇಷ್ಠ ಸ್ಥಾನದೊಂದಿಗೆ ಉನ್ನತೀಕರಿಸಿದನು. ಇಡೀ ಜಗತ್ತಿನಲ್ಲಿ ಇಸ್ಲಾಮಿನ ಕಳೆದುಹೋದ ವೈಭವವನ್ನು ಮರುಸ್ಥಾಪಿಸುವುದು ಅವರ ಕರ್ತವ್ಯವಾಗಿತ್ತು ಮತ್ತು ಅದು ಜೀವಂತ ಧರ್ಮವಾಗಿದೆ ಮತ್ತು ಅದರ ಸಂದೇಶವಾಹಕರು ಜೀವಂತ ಸಂದೇಶವಾಹಕರಾಗಿದ್ದಾರೆ ಮತ್ತು ಅದರ ಗ್ರಂಥವು ಜೀವಂತ ಗ್ರಂಥವಾಗಿದೆ ಮತ್ತು ಪುನರುತ್ಥಾನದ ದಿನದವರೆಗೆ ಇರುವುದು ಸಾಕ್ಷ್ಯಾಧಾರಗಳಿಂದ ಹಾಗೂ ಪುರಾವೆಗಳಿಂದ ಸಾಬೀತುಪಡಿಸುವುದು ಸಹ ಅವರ ಕರ್ತವ್ಯವಾಗಿತ್ತು. ಅದಕ್ಕಾಗಿ ಸಂಪೂರ್ಣ ಸ್ವಾತಂತ್ರ್ಯದೊಂದಿಗೆ ಬೋಧಿಸಲು ಮತ್ತು ಪ್ರಕಟಿಸಲು ಸಾಧ್ಯವಾಗುವಂತಹ ಸರ್ಕಾರದ ಅಗತ್ಯವಾಗಿತ್ತು. ಆದ್ದರಿಂದ ಸರ್ವಶಕ್ತನಾದ ಅಲ್ಲಾಹನ ಇಚ್ಛೆ ಮತ್ತು ವಿಧಿಯೂ ನಿಮ್ಮನ್ನು ಇಂಗ್ಲಿಷ್ ಸಾಮ್ರಾಜ್ಯದಲ್ಲಿ ಜನಿಸಿದೆ, ಅವರ ನೆರಳಿನಲ್ಲಿ ನೀವು ಬೋಧಿಸುವ ಮತ್ತು ಪ್ರಕಟಿಸುವ ಹಕ್ಕನ್ನು ಈಡೇರಿಸಿದರು. ಈ ಸ್ವಾತಂತ್ರ್ಯದಿಂದ, ನೀವು ಪ್ರಪಂಚದ ಯಾವುದೇ ಪ್ರದೇಶದಲ್ಲಿ ಇಸ್ಲಾಂ ಧರ್ಮವನ್ನು ಬೋಧಿಸುವ ಮತ್ತು ಪ್ರಕಟಿಸುವ ಕೆಲಸವನ್ನು ಮಾಡಲು ಸಾಧ್ಯವಿರಲಿಲ್ಲ. ಈ ಅರ್ಥದಲ್ಲಿ, ಇಂಗ್ಲಿಷ್ ಸರ್ಕಾರವು ತನ್ನ ಪ್ರಜೆಗಳನ್ನು ಬಹಳ ನ್ಯಾಯಯುತವಾಗಿ ನಡೆಸಿಕೊಂಡಿದೆ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಜೊತೆಗೆ ಪ್ರಚಾರ ಮತ್ತು ಪ್ರಕಟಣೆಗೆ ಸಂಪೂರ್ಣ ಹಕ್ಕನ್ನು ನೀಡಿದ ಕಾರಣ ಅವರು ಬ್ರಿಟಿಷ್ ಸರಕಾರವನ್ನು ಹೊಗಳಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹೇಳುತ್ತಾರೆ:

"ಅಲ್ ಮನಾರ್ ಪತ್ರಿಕೆಯ ಸಂಪಾದಕನ ಹಾಗೆ ಕೆಲವು ಅವಿವೇಕಿಗಳು ನನ್ನ ವಿರುದ್ಧ ಆಕ್ಷೇಪ ಮಾಡುತ್ತಾರೆ:- ಈ ವ್ಯಕ್ತಿ ಆಂಗ್ಲೇಯರು ಆಡಳಿತೆ ನಡೆಸುವ ದೇಶದಲ್ಲಿರುವ ಕಾರಣ ಜಿಹಾದನ್ನು ನಿಷಿದ್ಧಗೊಳಿಸುತ್ತಾನೆ. ಈ ಅವಿವೇಕಿಗಳಿಗೆ ತಿಳಿದಿಲ್ಲ: ನಾನು ಸುಳ್ಳು ಹೇಳಿ ಈ ಸರಕಾರವನ್ನು ಸಂತೋಷ ಪಡಿಸಲು ಇಚ್ಛಿಸುವವನಾಗಿದ್ದರೆ ಈಸಬ್ನು ಮರಿಯಮ್ ಶಿಲುಬೆಯ ಮರಣದಿಂದ ರಕ್ಷಿಸಲ್ಪಟ್ಟ ಆನಂತರ ಕಾಶ್ಮೀರಕ್ಕೆ ಹೋಗಿ ಶ್ರೀನಗರದಲ್ಲಿ ಸಹಜವಾಗಿ ಮೃತರಾದರು ಎಂದೂ ಅವರು ದೇವನಾಗಲೀ ದೇವ ಪುತ್ರನಾಗಲಿ ಆಗಿರಲಿಲ್ಲವೆಂದು ಪದೇ ಪದೇ ನೀನು ಹೇಳುತ್ತಿದ್ದೇನೋ? ಧಾರ್ಮಿಕ ಆವೇಶ ಭರಿತ ಆಂಗ್ಲೇಯರು ನನ್ನ ಈ ಹೇಳಿಕೆಯಿಂದ ಅತೃಪ್ತರಾಗಲಾರರೇ? ಓ ಅವಿವೇಕಿಗಳೇ, ಆಲಿಸಿರಿ. ನಾನು ಈ ಸರಕಾರವನ್ನು ಮೆಚ್ಚಿಸಲಿಕ್ಕೆ ಏನೂ ಹೇಳುತ್ತಾ ಇಲ್ಲ. ಈ ಸರಕಾರ ಇಸ್ಲಾಮ್ ಧರ್ಮದ ಮೇಲಾಗಲೀ ಧಾರ್ಮಿಕ ಅನುಷ್ಠಾನ ಕರ್ಮಗಳ ಮಳೆಗಾಳಿ ಯಾವುದೇ ಹಸ್ತಕ್ಷೇಪ ನಡೆಸುವುದಿಲ್ಲ. ಅದು ತನ್ನ ಧರ್ಮವನ್ನು ಅಭಿವೃದ್ಧಿಗೊಳಿಸಲು ನಮ್ಮ ವಿರುದ್ಧ ಖಡ್ಗ ಚಲಾಯಿಸುವುದೂ ಇಲ್ಲ. ಇಂಥಹ ಸರಕಾರದ ವಿರುದ್ಧ ಧಾರ್ಮಿಕ ಯುದ್ಧ ಮಾಡುವುದು ಪವಿತ್ರ ಖುರ್‌ಆನ ತತ್ವಗಳಿಗೆ ಅನುಸಾರವಾಗಿ ನಿಷಿದ್ಧವಾಗಿದೆ. ಏಕೆಂದರೆ ಈ ಸರಕಾರ ನಮ್ಮ ವಿರುದ್ಧ ಧಾರ್ಮಿಕ ಯುದ್ಧ ಮಾಡುತ್ತಾ ಇಲ್ಲ. ನಾವು ಅವರಿಗೆ ಕೃತಜ್ಞತೆ ಅರ್ಪಿಸುವುದು ನಮಗೆ ಕಡ್ಡಾಯವಾಗಿದೆ ಏಕೆಂದರೆ ನಾವು ಮಕ್ಕದಲ್ಲಿ ಮತ್ತು ಮದೀನದಲ್ಲಿ ಮಾಡಲು ಸಾಧ್ಯವಿಲ್ಲದ ಕೆಲಸ ಅವರ ದೇಶದಲ್ಲಿ ಮಾಡುತ್ತಿದ್ದೇವೆ. ಈ ದೇಶದಲ್ಲಿ ನಾನು ಜೀವಿಸುವಂತೆ ಮಾಡಿದುದು ಅಲ್ಲಾಹನ ಜಾಣ್ಮೆ ಪ್ರಕಾರವಾಗಿದೆ. ನಾನು ಅಲ್ಲಾಹನ ವೈಭವಕ್ಕೆ ಕುಂದುಂಟು ಮಾಡಲಾರೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳಿರುವನು. ವ ಆವಯ್‌ನಾಹುಮಾ ಅಲಾ ರಬ್‌ವತಿನ್ ಝಾತಿ ಖರಾರಿನ್ ವ ಮಈನಿನ್. ಈವಚನದಲ್ಲಿ ಅಲ್ಲಾಹನು ನಮಗೆ ಮನವರಿಕೆ ಮಾಡಿ ಕೊಡುತ್ತಿದ್ದಾನೆ. ನಾವು ಈಸಾ ಮಸೀಹರಿಗೆ ಶಿಲುಬೆಯ ಮರಣದ ವಿಪತ್ತಿನಿಂದ ರಕ್ಷಣೆ ನೀಡಿದೆವು. ಅವರಿಗೆ ಮತ್ತು ಅವರ ತಾಯಿಗೆ ಎತ್ತರವಾದ ಸ್ಥಳದಲ್ಲಿ ಆಶ್ರಯ ನೀಡಿದೆವು. ಅದು ನೀರ ಝರಿಗಳಿಂದ ಭರಿತವಾದ ಸುಖ ವಾಸದ ಸ್ಥಳವಾಗಿತ್ತು. ಇದು ಕಾಶ್ಮೀರದ ಶ್ರೀನಗರವನ್ನು ಸೂಚಿಸುತ್ತದೆ. ಇದೇ ರೀತಿ ಅಲ್ಲಾಹನು ನನಗೆ ಈ ಸರಕಾರದ ಎತ್ತರದ ಸ್ಥಳದಲ್ಲಿ ಆಶ್ರಯ ನೀಡಿದನು. ಇಲ್ಲಿಗೆ ಗೊಂದಲಗಾರರು ತಲಪಲಾರರು. ಈ ದೇಶದಲ್ಲಿ ಸತ್ಯವಾದ ಜ್ಞಾನದ ಝರಿಗಳು ಜಾರಿಯಲ್ಲಿವೆ. ಗೊಂದಲಗಾರರ ಆಕ್ರಮಣಗಳಿಂದ ರಕ್ಷಣೆ ಮತ್ತು ಶಾಂತಿ ಇದೆ. ಇಂತಹ ಸರಕಾರದ ಉಪಕಾರಗಳ ಬಗ್ಗೆ ಕೃತಜ್ಞನಾಗುವುದು ಆವಶ್ಯಕವಲ್ಲವೇ?

(ಕಿಶ್ತಿ ಎ ನೂಹ್, ರೂಹಾನಿ ಖಝಾಇನ್, ಸಂಪುಟ-19, ಪುಟ-75 ಅಡಿಟಿಪ್ಪಣಿ)

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನಾನು ಸುಳ್ಳು ಹೇಳಿ ಈ ಸರಕಾರವನ್ನು ಮೆಚ್ಚಿಸಬಯಸುವುದಿಲ್ಲ. ಹೀಗಿರುತ್ತಿದ್ದರೆ ನಾನು ಅವರ ದೇವನಿಗೆ ಮೃತಪಟ್ಟಿರುವನು ಎಂದು ಏಕೆ ಹೇಳುತ್ತಿದ್ದೆ. ಇದರಿಂದ ಅವರಿಗೆ ನೋವಾಗುವುದಿಲ್ಲವೇ. ಅಂದಹಾಗೆ ಅವರು(ಅ) ಏನೆಲ್ಲ ಹೇಳಿದರು. ಅದು ಸತ್ಯವನ್ನು ಸ್ಪಷ್ಟಗೊಳಿಸಲೆಂದೇ ಹೇಳಿರುತ್ತಾರೆ. ಇಸ್ಲಾಮಿನ ಶಿಕ್ಷಣಕ್ಕನುಸಾರವಾಗಿಯೇ ಹೇಳಿರುತ್ತಾರೆ. ಇದು ಹಝ್ರತ್ ಮಸೀಹ್ ಮೌಊದ್(ಅ) ರವರ ಮೇಲೆ, ಅವರು ಬ್ರಿಟಿಷ್ ಸರಕಾರವನ್ನು ಹೊಗಳುತ್ತಿದ್ದರು ಎಂಬ ಆರೋಪ ಮಾಡುವವರ ಹೇಳಿಕೆಗಳನ್ನು ಗಮನಿಸಿ. ಅಲ್ಲಾಮ ಸರ್ ಮುಹಮ್ಮದ್ ಇಕ್ಬಾಲ್- ಆ ಕಾಲದಲ್ಲಿ ಬ್ರಿಟಿಷರ ಬಗ್ಗೆ ಅವರು ಏನು ಹೇಳುತ್ತಿದ್ದರು ಮತ್ತು ಏನು ಬರೆಯುತ್ತಿದ್ದರು, ಅವರ ಈ ಪೈಕಿ ಯಾವ ಭಾವನೆಗಳಿದ್ದವು, ಅನಿಸಿಕೆಗಳಿದ್ದವು ನೋಡಿರಿ. ರಾಣಿ ವಿಕ್ಟೋರಿಯಾ ಅವರು ನಿಧನಗೊಂಡ ನಂತರ ಅವರ ಸ್ಮರಣಾರ್ಥ ಕವನದಲ್ಲಿ ಬರೆಯುತ್ತಾರೆ:

ಮಯ್ಯತ್ ಉಠೀ ಹೈ ಶಾಹ್‌ಕೀ, ತುಆ‌ಝೀಮ್‌ಕೇ ಲಿಯೇ  
ಇಕ್ಬಾಲ್ ಉಡ್‌ಕೇ ಖಾಕ್ ಸರೆರಾಹ್ ಗುಝಾರ್ ಹೋ ॥  
ಸೂರತ್ ವಹೀ ಹೈ, ನಾಮ್ ಮೇ ರಖಾ ಹುವಾ ಹೈ ಕ್ಯಾ  
ದೆತೆ ಹೈಂ ನಾಮ್ ಮಾಹೆ ಮುಹರ್ರಂ ಕಾ ಹಮ್ ತುಜ್ಝೆ ॥

ಅಂದರೆ ರಾಣಿ ವಿಕ್ಟೋರಿಯಾ ನಿಧನಗೊಂಡ ಮಾಸವು ಇಕ್ಬಾಲ್ ಹೇಳುತ್ತಾರೆ. ಆ ಮಾಸದ ಹೆಸರು ಏನಾದರೂ ಇಟ್ಟುಕೊಳ್ಳಿ. ವಾಸ್ತವವೇನೆಂದರೆ ಅದು ಮುಹರ್ರಂ ಘಟನೆಗಿಂತ ಕಡಿಮೆಯೇನಲ್ಲ. ಮುಹರ್ರಂ ತಿಂಗಳಿನಲ್ಲಿ ಏನು ದಾರುಣ್ಯ ಘಟನೆ ನಡೆದಿತ್ತು. ಇದು ಅದರದ್ದೇ ಹೊಸ ರೂಪವಾಗಿದೆ.

ಮತ್ತೆ ಹೇಳುತ್ತಾರೆ:

ಕಹತೆ ಹೈಂ ಆಜ್ ಈದ್ ಹುವೀ, ಹವಾ ಕರೆ  
ಇಸ್ ಈದ್ ಸೇ ತೋ ಮೌತ್ ಹಿ ಆಯೇ, ಖುದಾ ಕರೆ ॥

ಅನುವಾದ: ಇಂದು ಹಬ್ಬವಿದೆ ಎನ್ನುತ್ತಾರೆ. ಹೇಳಲಿ ಬಿಡಿ. ಇದು ಹಬ್ಬ ಎಂದಾರೆ ಇದಕ್ಕಿಂತ ಮರಣವೇ ಲೇಸು, ಭಗವಂತನು ಹಾಗೆ ಮಾಡಲಿ.

ಮತ್ತು ಮುಂದೆ ಬರೆಯುತ್ತಾರೆ:

ಅಯೇ ಹಿಂದ್ ತೆರೆ ಸರ್ ಸೇ ಉಠಾ ಸಾಯ ಏ ಖುದಾ  
ಇಕ್ ಗ್ಝಮ್‌ಗುಸಾರ್ ತೇರೆ ಮಕೀನೌಂ ಕಿ ಥೀ, ಗಯೀ  
ಹಿಲ್ತಾ ಹೈ ಜಿಸ್‌ಸೆ ಅರ್ಷ್ ರೋನಾ ಉಸೀ ಕಾ ಹೈ  
ಝೀನತ್ ಥೀ ಜಿಸ್‌ಸೇ ತುಜ್‌ಕೋ. ಜನಾಝಾ ಉಸೀ ಕಾ ಹೈ

ಅನುವಾದ : ಓ ಹಿಂದ್, ನಿನ್ನ ಶಿರದಿಂದ ಭಗವಂತನ, ನೆರಳು ಹೋಗಿದೆ. ನಿನ್ನ ಪ್ರಜೆಗಳ ಅದು ಸಹಾನುಭೂತಿಯಾಗಿತ್ತು. ಅಗಲಿಹೋಗಿದೆ.

*(ಪುಟ ಸಂಖ್ಯೆ-08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಜಮಾಅತಿನ ವ್ಯವಸ್ಥೆಯಲ್ಲಿ ಪ್ರತಿಯೊಂದು ಹಂತದಲ್ಲೂ ಹುದ್ದೇದಾರರನ್ನು ಆಯ್ಕೆ ಮಾಡಲಾಗುತ್ತದೆ. ಸ್ಥಳೀಯ ಮಟ್ಟದಿಂದ ಕೇಂದ್ರದವರೆಗೆ, ರಾಷ್ಟ್ರೀಯ ಮಟ್ಟದವರೆಗೆ.

ನೀವು ಚುನಾವಣೆ ನಡೆಸುವಾಗಲೆಲ್ಲ ಅಮಾನತ್ತಿನ ಹಕ್ಕನ್ನು ಈಡೇರಿಸುವಂತಹ ವ್ಯಕ್ತಿಗಳನ್ನು ಆಯ್ಕೆ ಮಾಡಬೇಕು ಎಂಬ ಸಂಗತಿ ನಿಮ್ಮ ಮುಂದಿರಬೇಕು ಎಂದು ಅಲ್ಲಾಹನು ಆದೇಶ ನೀಡುತ್ತಾನೆ.

ಹಝ್ರತ್ ಪೈಗಂಬರ್(ಸ) ಹೇಳಿದರು: ಯಾವನಿಗೆ ನಾನು ಯಾವುದಾದರೂ ಸೇವೆಯನ್ನು ಒಪ್ಪಿಸುತ್ತೇನೋ ಅಲ್ಲಾಹನು ಆತನ ಸಹಾಯವನ್ನು ಮಾಡುತ್ತಾನೆ. ಯಾವನು ಸ್ವತಃ ಯಾವುದಾದರೂ ಕೆಲಸವನ್ನು ತನಗಾಗಿ ಒಪ್ಪಿಸಲು ಆಸೆಪಡುತ್ತಾನೋ ಅಲ್ಲಾಹನ ಕಡೆಯಿಂದ ಆತನಿಗೆ ಸಹಾಯ ಲಭಿಸದು.

ಅಲ್ಲಾಹನು ನಮ್ಮ ಮೇಲ್ನೋಟಗಾರನಾಗಿದ್ದಾನೆ ಮತ್ತು ಅವನು ನಮ್ಮ ಪ್ರತಿಯೊಂದು ಚಲನವಲನಗಳನ್ನು ನೋಡುತ್ತಿದ್ದಾನೆ ಎಂಬ ಯೋಚನೆ ಸದಾ ನಿಮ್ಮ ಮನಸ್ಸಿನಲ್ಲಿ ಇರಬೇಕು. ಯಾವುದಾದರೂ ಹುದ್ದೆ ಲಭಿಸಿದರೆ ನಾವು ಎಲ್ಲ ವಿಧದ ಬಂಧನಗಳಿಂದ ಸ್ವತಂತ್ರಗೊಂಡೆವು ಎಂದು ಭಾವಿಸಬೇಡಿರಿ. ಬದಲಾಗಿ ಈಗ ಅಲ್ಲಾಹನ ಹಿಡಿತಕ್ಕೆ ನೀವು ಹೆಚ್ಚು ಸಮೀಪವಾಗಿದ್ದೀರಿ ಎಂದು ಅರಿತುಕೊಳ್ಳಿರಿ.

ನಿಮ್ಮ ವೈಯಕ್ತಿಕ ಮಾದರಿಗಳು ಬಹಳ ಮುಖ್ಯವಾಗಿದೆ. ಬಹಳಷ್ಟು ಇಸ್ತಿಗ್‌ಫಾರ್ ಮಾಡುವ, ಅಲ್ಲಾಹನ ತಸ್ಬೀಹ್ ಮಾಡುವ ಮತ್ತು ತಮ್ಮ ಸ್ಥಿತಿಗಳ ಬಗ್ಗೆ ಅವಲೋಕನ ನಡೆಸಬೇಕಾದ ಆವಶ್ಯಕತೆಯಿದೆ

**ಪ್ರತಿಯೊಬ್ಬ ಹುದ್ದೇದಾರ ತಮ್ಮ ವಿಭಾಗವನ್ನು ಉತ್ತಮಗೊಳಿಸಲಿಕ್ಕಾಗಿ ಕನಿಷ್ಠ ಪಕ್ಷ ಎರಡು ರಕಅತ್ ನಫ್‌ಲ್ ನಮಾಝನ್ನು ನಿರ್ವಹಿಸಬೇಕು.**

ಹುದ್ದೇದಾರರು ತಮ್ಮ ಮಾದರಿಗಳನ್ನು ಸ್ಥಾಪಿಸಬೇಕು. ವಿಶೇಷವಾಗಿ ಜಮಾಅತಿನ ಅಮೀರ್, ಸದರ್ ಮತ್ತು ತರ್‌ಬಿಯತ್ ಸೆಕ್ರಟರಿಗಳು. ಇತರರು ಕೂಡ ಮಾದರಿಯನ್ನು ತೋರಿಸಬೇಕು.

ಸಮುದಾಯದ ನಾಯಕ ಸಮುದಾಯದ ಸೇವಕನಾಗಿ ತನ್ನ ಹೊಣೆಗಾರಿಕೆಯನ್ನು ನಿರ್ವಹಿಸಬೇಕು ಎಂಬ ಹಝ್ರತ್ ಪೈಗಂಬರ್(ಸ)ರ ಮಾತನ್ನು ನೆನಪಿಡಬೇಕು.

ಮುಸ್ಲಿಮರ ಸಾಮೂಹಿಕ ವ್ಯವಹಾರಗಳಿಗೆ ಯಾರು ಜವಾಬ್ದಾರರಾಗಿದ್ದರೂ, ಜನರ ಅಗತ್ಯಗಳನ್ನು ಪೂರೈಸುವವರೆಗೆ ಅಲ್ಲಾಹನು ಅವನ ಅಗತ್ಯಗಳನ್ನು ಮತ್ತು ಗುರಿಗಳನ್ನು ಪೂರೈಸುವುದಿಲ್ಲ ಎಂದು ಹಝ್ರತ್ ಪೈಗಂಬರ್(ಸಲ್ಲಲ್ಲಾಹು ಅಲೈಹಿವ ಸಲ್ಲಮ್) ಹೇಳಿದರು.

ಆಮಿಲದ ಮೀಟಿಂಗುಗಳಲ್ಲಿ ಭಾಗಿಯಾಗಿ ತಮ್ಮ ಅಭಿಪ್ರಾಯವನ್ನು ಹೇಳಿಕೊಂಡು ಮಾತ್ರ ನಾವು ನಮ್ಮ ಕರ್ತವ್ಯವನ್ನು ಈಡೇರಿಸಿದೆವು ಎಂದು ಭಾವಿಸುವುದು ಸಾಕಾಗುವುದಿಲ್ಲ. ಜನರ ಒಳಿತಿಗಾಗಿ ಯೋಜನೆಗಳನ್ನು ಮಾಡುವುದು ಮತ್ತು ಅದರ ಪ್ರಕಾರ ಕೆಲಸಮಾಡಿಸುವುದು ಅತ್ಯಂತ ಮುಖ್ಯವಾದ ಸಂಗತಿಯಾಗಿದೆ.

## ಹುದ್ದೆದಾರರ ಕರ್ತವ್ಯಗಳು ಮತ್ತು ಅವರ ಜವಾಬ್ದಾರಿಗಳು

ಉಮೂರೆ ಆಮ್ಮದ ಕೆಲಸವು ಬಹಳ ವಿಶಾಲವಾಗಿದೆ. ಜಮಾಅತ್ತಿನಲ್ಲಿ ಆರ್ಥಿಕ ಸ್ಥಿರತೆಯನ್ನು ಉಂಟುಮಾಡುವ ಕಾರ್ಯಕ್ರಮಗಳನ್ನು ರಚಿಸುವುದು ಅವರ ಕೆಲಸವಾಗಿದೆ. ಉದ್ಯೋಗ ಮತ್ತು ಇತರ ಉದ್ಯೋಗದ ಮೂಲಗಳಿಗಾಗಿ ಜಮಾಅತ್‌ನ ಸದಸ್ಯರಿಗೆ ಮಾರ್ಗದರ್ಶನ ಮತ್ತು ಸಹಾಯ ಮಾಡುವುದು ಅವರ ಕೆಲಸವಾಗಿದೆ. ಜನಸೇವೆಯ ಕೆಲಸಗಳನ್ನು ನಿರ್ವಹಿಸುವುದು ಅವರ ಕೆಲಸವಾಗಿದೆ.

ಹುದ್ದೆದಾರರು ಜಮಾಅತ್ತಿನ ಸದಸ್ಯರ ಸೇವೆ ಮಾಡುವ ಹಕ್ಕನ್ನು ಪೂರೈಸುವ ಮಾರ್ಗವಾಗಿದೆ ಮತ್ತು ಅವರ ವಿಶ್ವಾಸವನ್ನು ರಕ್ಷಿಸುವಲ್ಲಿ ಪಾತ್ರವನ್ನು ವಹಿಸಬಹುದು ಮತ್ತು ಜಮಾಅತ್ತಿನ ಐಕ್ಯತೆಯನ್ನು ಕಾಪಾಡುವಲ್ಲಿ ಮತ್ತು ಅವರ ಆಮಾನತ್ತುಗಳನ್ನು ಪೂರೈಸುವಲ್ಲಿ ತಮ್ಮ ಪಾತ್ರವನ್ನು ವಹಿಸಬಹುದು. ಹೀಗೆ ಸಂಭವಿಸಿದಾಗ, ಎಂತಹ ಸುಂದರವಾದ ಸಮಾಜವನ್ನು ರಚಿಸಲಾಗುವುದು ಎಂದರೆ ಅದು ಒಂದು ನಿಜವಾದ ಇಸ್ಲಾಮಿಕ್ ಸಮಾಜವಾಗಿದೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ ಯ **'ಮಸ್ಜಿದ್ ಇಸ್ಲಾಮಬಾದ್'** ನಿಂದ **18-08-2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

إِيَّاكَ نَعْبُدُ وَإِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಅತ್ಯುನ್ನತನಾದ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳುತ್ತಾನೆ: **ಇನ್ನಲ್ಲಾಹ ಯಅ್‌ಮುರುಕುಮ್ ಅನ್ ತುಅದ್ದುಲ್ ಅಮಾನಾತಿ ಇಲಾ ಅಹ್ಲಿಹಾ** (ಅನ್ನಿಸಾಅ್: 59) ಖಂಡಿತವಾಗಿಯೂ ಅಮಾನತುಗಳನ್ನು ಅವುಗಳ ಹಕ್ಕುದಾರರಿಗೆ ವಹಿಸಿಕೊಡಬೇಕೆಂದು ಅಲ್ಲಾಹನು ಆಜ್ಞಾಪಿಸುತ್ತಾನೆ. ಒಂದು ಹದೀಸಿನಲ್ಲಿ ಹಝ್ರತ್ ಪೈಗಂಬರ್(ಸ) ಹೇಳಿದರು: ಜನರ ಕಾರ್ಯಗಳನ್ನು ನೋಡಲು ನೀಡಲಾದಂತಹ ಹುದ್ದೆ ಅಥವಾ ಪದವಿ ಕೂಡ ಒಂದು ಅಮಾನತ್ತು ಆಗಿದೆ. (ಸಹೀಹ್ ಮುಸ್ಲಿಮ್ ಕಿತಾಬುಲ್ ಅಮಾರತ್, ಹದೀಸ್-4719)

ಆದ್ದರಿಂದ ಈ ರೀತಿಯಲ್ಲಿ ನಮ್ಮ ಜಮಾಅತಿನ ವ್ಯವಸ್ಥೆಯಲ್ಲೂ ಪ್ರತಿಯೊಂದು ಹುದ್ದೆ ಅಥವಾ ಸೇವೆ ಅಮಾನತ್ತು ಆಗಿದೆ.

ಜಮಾಅತಿನ ವ್ಯವಸ್ಥೆಯಲ್ಲಿ ಪ್ರತಿಯೊಂದು ಹಂತದಲ್ಲೂ

ಹುದ್ದೇದಾರರನ್ನು ಆಯ್ಕೆ ಮಾಡಲಾಗುತ್ತದೆ. ಸ್ಥಳೀಯ ಮಟ್ಟದಿಂದ ಕೇಂದ್ರದವರೆಗೆ, ರಾಷ್ಟ್ರೀಯ ಮಟ್ಟದವರೆಗೆ. ಅದೇ ರೀತಿ ಕೇಂದ್ರದಲ್ಲಿದ್ದಾರೆ ನತ್ತೆ ಉಪ ಸಂಘಟನೆಗಳಲ್ಲಿಯೂ ಅದೇ ನಿಟ್ಟಿನಲ್ಲಿ ಹುದ್ದೆದರರನ್ನು ಆಯ್ಕೆ ಮಾಡುತ್ತೇವೆ. ಅದು ಕೇಂದ್ರೀಕೃತ ವ್ಯವಸ್ಥೆಯಾಗಲಿ ಅಥವಾ ಉಪ-ಸಂಘಟನಾ ವ್ಯವಸ್ಥೆಯಾಗಲಿ, ತಳಮಟ್ಟದಿಂದ ಕೇಂದ್ರ ಮಟ್ಟದವರೆಗೆ ಮತ್ತು ಸಾಮಾನ್ಯವಾಗಿ ಚುನಾವಣೆಯ ಮೂಲಕ ಎಲ್ಲ ಕಡೆ ಹುದ್ದೆದಾರರನ್ನು ನೇಮಿಸಲಾಗುತ್ತದೆ. ಆದ್ದರಿಂದ ಈ ಉದ್ದೇಶಕ್ಕಾಗಿ ನೀವು ಚುನಾವಣೆ ನಡೆಸುವಾಗಲೆಲ್ಲ ಅಮಾನತ್ತಿನ ಹಕ್ಕನ್ನು ಈಡೇರಿಸುವಂತಹ ವ್ಯಕ್ತಿಗಳನ್ನು ಆಯ್ಕೆ ಮಾಡಬೇಕು ಎಂಬ ಸಂಗತಿ ನಿಮ್ಮ ಮುಂದಿರಬೇಕು ಎಂದು ಅಲ್ಲಾಹನು ಆದೇಶ ನೀಡುತ್ತಾನೆ.

ಆಯ್ಕೆ ಮಾಡುವಾಗ ಬಂಧುತ್ವದ ಕಡೆಗೆ ಗಮನ ನೀಡಮಾಡಬಾರದು. ಕೆಲವೊಮ್ಮೆ ಕೆಲವು ಹುದ್ದೇದಾರರರನ್ನು ಕೇಂದ್ರದ ಮೂಲಕ ಅಥವಾ ಖಲೀಫತುಲ್ ಮಸೀಹ್‌ರ ಕಡೆಯಿಂದ ನಿಶ್ಚಯಿಸಲಾಗುತ್ತದೆ. ಚೆನ್ನಾಗಿ ಚಿಂತಿಸಿಕೊಂಡು ಲಭ್ಯವಿರುವವರಲ್ಲಿ ಅತ್ಯಂತ ಉತ್ತಮ ವ್ಯಕ್ತಿಯನ್ನು ನಿಶ್ಚಯಿಸಲು ಪ್ರಯತ್ನಿಸಲಾಗುತ್ತದೆ. ಆದರೆ ಕೆಲವೊಮ್ಮೆ ಅಂದಾಜು ಮಾಡುವಾಗ ತಪ್ಪು ಕೂಡ ಘಟಿಸುತ್ತದೆ. ಅಥವಾ ಹುದ್ದೆ ಲಭಿಸಿದ ನಂತರ ವ್ಯಕ್ತಿಯ ಸ್ವಭಾವದಲ್ಲಿ ಬದಲಾವಣೆ ಉಂಟಾಗುತ್ತದೆ ಮತ್ತು ವಿನಯ ಹಾಗೂ ಪರಿಶ್ರಮದಿಂದ ಕೆಲಸ ಮಾಡುವ ಸ್ಫೂರ್ತಿ ನೆಲೆನಿಲ್ಲದೇ ಹೋಗುತ್ತದೆ. ಹೇಗಿದ್ದರೂ ದುಆ ಮಾಡಿಕೊಂಡು ನಮ್ಮಲ್ಲಿ ಅತ್ಯುತ್ತಮ ವ್ಯಕ್ತಿಯನ್ನು ಚುನಾಯಿಸಲು ನಾವು ಪ್ರಯತ್ನ ಮಾಡಬೇಕು.

ಆದಾಗ್ಯೂ, ಯಾವನು ಹುದ್ದೆ ಲಭಿಸಲಿಕ್ಕಾಗಿ ಮುಂದೆ ಮುಂದೆ ಧಾವಿಸಿಕೊಂಡು ಬರುತ್ತಾನೋ ಅಂಥವನಿಗೆ ಸೇವೆಯನ್ನು ಒಪ್ಪಿಸದೇ ಇರಲು ಸಾಮಾನ್ಯವಾಗಿ ಪ್ರಯತ್ನಿಸಲಾಗುತ್ತದೆ. ಅಂತಹ ವ್ಯಕ್ತಿಯ ಹೆಸರು ಚುನಾಯಿತಗೊಂಡು ಬಂದರೂ ಕೂಡ ಅಂಥವನ ಸ್ಥಿತಿಗತಿಗಳ ಬಗ್ಗೆ ಗೊತ್ತಿರುವುದಾದರೆ ಅಂಥವನಿಗೆ ಕೇಂದ್ರ ಅಥವಾ ಖಲೀಫತುಲ್ ಮಸೀಹ್ ಮಂಜೂರಾತಿ ನೀಡುವುದಿಲ್ಲ. ಇದು ಹಝ್ರತ್ ಪೈಗಂಬರ್(ಸ)ರ ನಿರ್ದೇಶನ ಪ್ರಕಾರವೇ ಆಗಿದೆ. ಒಂದು ಬಾರಿ ಹಝ್ರತ್ ಪೈಗಂಬರ್(ಸ)ರ ಬಳಿ ಇಬ್ಬರು ವ್ಯಕ್ತಿಗಳು ಬಂದು ಹೀಗೆ ಹೇಳಿದರು: ಇಂತಿಂತಹ ಸೇವೆಯನ್ನು ನಮಗೆ ಒಪ್ಪಿಸಿರಿ. ನಾವು ಅದಕ್ಕೆ ಅರ್ಹರು. ಹಝ್ರತ್ ಪೈಗಂಬರ್(ಸ) ಹೇಳಿದರು: ಯಾವನಿಗೆ ನಾನು ಯಾವುದಾದರೂ ಸೇವೆಯನ್ನು ಒಪ್ಪಿಸುತ್ತೇನೋ ಅಲ್ಲಾಹನು ಆತನ ಸಹಾಯವನ್ನು ಮಾಡುತ್ತಾನೆ. ಯಾವನು ಸ್ವತಃ ಯಾವುದಾದರೂ ಕೆಲಸವನ್ನು ತನಗಾಗಿ ಒಪ್ಪಿಸಲು ಆಸೆಪಡುತ್ತಾನೋ ಅಲ್ಲಾಹನ ಕಡೆಯಿಂದ ಆತನಿಗೆ ಸಹಾಯ ಲಭಿಸದು. (ಸಹೀಹ್ ಅಲ್‌ಬುಖಾರಿ, ಕಿತಾಬುಲ್ ಅಹ್ಕಾಮ್, ಹದೀಸ್-7146) (ಸಹೀಹ್ ಬುಖಾರಿ, ಕಿತಾಬುಲ್ ಅಹ್ಕಾಮ್, ಹದೀಸ್-7149)

ಆತನ ಕೆಲಸದಲ್ಲಿ ಅನುಗ್ರಹವಿರುವುದಿಲ್ಲ. ಆದ್ದರಿಂದ ಎಂದಿಗೂ ಹುದ್ದೆಯನ್ನು ಆಸೆಪಡಬಾರದು.

ಆದರೆ ಧರ್ಮದ ಸೇವೆಯ ಆಸಕ್ತಿ ಇರಬೇಕು. ಅವಕಾಶ ಲಭಿಸಿದರೆ ಸೇವೆಯನ್ನು ನೀಡುತ್ತೇನೆ ಮತ್ತು ಈ ಸೇವೆಯನ್ನು ಯಾವುದೇ ಬಣ್ಣದಲ್ಲಿ ಲಭಿಸಿದರೂ ಅದನ್ನು ಮಾಡಲು ಪ್ರಯತ್ನಿಸಬೇಕು. ಹೀಗೆ ಯುದ್ದೆಯನ್ನು ಪಡೆಯುವ ಆಸೆ ಇಡುವುದು, ಯಾವುದಾದರು ಕೆಲಸದ ಮೇಲ್ವಿಚಾರಕನಾಗಲು ಬಯಸುವುದು ಮತ್ತು ಅದನ್ನು ಮಾಡುವುದು ಅಪೇಕ್ಷಣೀಯವಲ್ಲ.

ಹೌದು, ಸೇವಾ ಮನೋಭಾವನೆ ಇರಬೇಕು, ಯಾವುದೇ ಬಣ್ಣವಿರಲಿ ಅದು ಶ್ಲಾಘನೀಯವಾದದ್ದು.

ಆದ್ದರಿಂದ ಈ ವಿಷಯಗಳನ್ನು ಯಾವಾಗಲೂ ಆಯ್ಕೆಗಾರರ ಯಾವಾಗಲು ತಮ್ಮ ಮುಂದೆ ಇಡಬೇಕು. ಪವಿತ್ರ ಖುರ್‌ಆನ್‌ನ ಆದೇಶವನ್ನು ಮತ್ತು ಹಝ್ರತ್ ಪೈಗಂಬರ್(ಸ) ಅವರ ಉಪದೇಶಗಳನ್ನು ಯಾವಾಗಲೂ ನಿಮ್ಮ ಮುಂದೆ ಇಡಬೇಕು, ದುಆವಿನ ನಂತರ, ಸೇವೆ ಸಲ್ಲಿಸುವುದಕ್ಕೆ ಹೆಚ್ಚು ಅರ್ಹರಾದವರನ್ನು ಆಯ್ಕೆ ಮಾಡಬೇಕು. ಮತ್ತು ಎರಡನೆಯದಾಗಿ, ಒಬ್ಬರು ಯಾವುದೇ ಹುದ್ದೆಗೆ ಆಕಾಂಕ್ಷಿಗಳಾಗಿದ್ದರೆ, ಆತನನ್ನು ಜಮಾಅತ್ತಿನ ವ್ಯವಸ್ಥೆಯಲ್ಲಿ ಮತ್ತು ಪ್ರತಿ ಚುನಾವಣಾ ವೇದಿಕೆಯಲ್ಲಿ ನಿರುತ್ಸಾಹಗೊಳಿಸಬೇಕು ಮತ್ತು ಮತದಾರರು ತಮ್ಮ ಆಯ್ಕೆಯನ್ನು ನ್ಯಾಯಯುತವಾಗಿ ಮಾಡುವ ಹಕ್ಕನ್ನು ಚಲಾಯಿಸಬೇಕು.

ಸಾಮಾನ್ಯವಾಗಿ, ಈ ಚುನಾವಣಾ ವಿಧಾನವೆಂದರೆ, ದೇಶದ ಕೇಂದ್ರ ಮಟ್ಟದಲ್ಲಿ ಹುದ್ದೆದಾರರನ್ನು ಆಯ್ಕೆ ಮಾಡುವ ಅಭಿಪ್ರಾಯವನ್ನು ಚುನಾವಣಾ ಫಲಿತಾಂಶಗಳೊಂದಿಗೆ ಖಲೀಫ ಎ ವಖ್ತ್‌ಗೆ ಪ್ರಸ್ತುತಪಡಿಸಲಾಗುತ್ತದೆ ಮತ್ತು ಖಲೀಫ ಎ ವಖ್ತ್ ಪ್ರಸ್ತುತಪಡಿಸಿದ ಹೆಸರನ್ನು ಆಯ್ಕೆ ಮಾಡುವ ಹಕ್ಕನ್ನು ಹೊಂದಿರುತ್ತಾರೆ. ಅವರು ಹೆಚ್ಚಿನ ಅಭಿಪ್ರಾಯಗಳನ್ನು ಹೊಂದಿರುವ ಹೆಸರುಗಳನ್ನು ಆಯ್ಕೆ ಮಾಡಬಹುದು ಅಥವಾ ಕಡಿಮೆ ವೋಟ್‌ಗಳನ್ನು ಹೊಂದಿರುವವರನ್ನು ಆಯ್ಕೆ ಮಾಡಬಹುದು. ಕೆಲವೊಮ್ಮೆ, ಆ ವ್ಯಕ್ತಿಯ ಬಗ್ಗೆ ಕೆಲವು ಮಾಹಿತಿಗಳು ಮತ್ತು ಅಂತಹ ಕೆಲವು ಸನ್ನಿವೇಶಗಳು ಕೇಂದ್ರ ಮತ್ತು ಖಲೀಫರಿಗೆ ತಿಳಿದಿರುತ್ತವೆ ಆದರೆ ಸಾಮಾನ್ಯ ಮನುಷ್ಯನಿಗೆ ತಿಳಿದಿರುವುದಿಲ್ಲ. ಆದಾಗ್ಯೂ, ಬಹುಮತದ ಅಭಿಪ್ರಾಯದೊಂದಿಗೆ ಆಯ್ಕೆಯಾದವನ್ನು ಆಯ್ಕೆ ಮಾಡಲೇ ಬೇಕು ಎಂದು ಅವಶ್ಯಕವಲ್ಲ.

ಅದೇ ರೀತಿ ದೇಶದ ಜಮಾಅತ್‌ಗಳ ಚುನಾವಣೆಗಳಲ್ಲಿ ನಿಯಮಾನುಸಾರ ಸ್ಥಳೀಯ ಕೇಂದ್ರಾಡಳಿತವು ಕೆಲವನ್ನು ಅನುಮೋದಿಸುತ್ತದೆ, ಒಂದುವೇಳೆ ಅದರಲ್ಲಿ ಏನಾದರೂ ಬದಲಾವಣೆ ಮಾಡಬೇಕಾದರೆ ಖಲೀಫರನ್ನು ಕೇಳುತ್ತಾರೆ. ಏನೇ ಆಗಲಿ ಉತ್ತಮ ಕೆಲಸ ಮಾಡುವ ಹುದ್ದೆದಾರರನ್ನು ನೀಡಬೇಕೆಂದು ಆದಷ್ಟು ಪ್ರಯತ್ನ ಮಾಡಲಾಗುತ್ತೆ ಆದರೆ ಕೆಲವೆಡೆ ಇರುವ ಜನರಲ್ಲಿಯೇ ಆಯ್ಕೆ ಮಾಡಬೇಕಾಗುತ್ತೆ ಆದರೆ ಇಲ್ಲಿಯೂ ಆಯ್ಕೆ ಮಾಡುವವರು ಬಹಳ ಜಾಗೃಕರಾಗಿ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಉತ್ತಮ ರೀತಿಯಲ್ಲಿ ಸೇವೆ ನೀಡುವವರನ್ನು ಆಯ್ಕೆ ಮಾಡಬೇಕು. ಹುದ್ದೆಯನ್ನು ಆಸೆಪಡುವವನಿಗಾಗಿ, ಸ್ನೇಹಿತನೆಂಬ ಕಾರಣಕ್ಕಾಗಿ, ಸಂಬಂಧಿಕನೆಂಬ ಕಾರಣಕ್ಕಾಗಿ ಅಥವಾ ಹೆಚ್ಚಿನ ಜನರು ಒಬ್ಬನ ಪರವಾಗಿ ಕೈಯೆತ್ತಿದೆ ಎಂಬ ಕಾರಣಕ್ಕಾಗಿ ತಮ್ಮ ಓಟನ್ನು ನೀಡಬಾರದು. ಇದು ಅಲ್ಲಾಹನ ಹಾಗೂ ಹಝ್ರತ್ ಪೈಗಂಬರ್(ಸ) ಅವರ ಆದೇಶಗಳಿಗೆ ವಿರುದ್ಧವಾಗಿದೆ.

ಜಮಾಅತ್ತಿನ ಕೇಂದ್ರ ವ್ಯವಸ್ಥೆಯ ಚುನಾವಣೆಗಳು ಈ ವರ್ಷ ನಡೆಯದಿದ್ದರೂ, ಅವು ಈಗಾಗಲೇ ನಡೆದಿವೆ, ಆದರೆ ಕೆಲವು ಕಡೆ ಅನ್ಸಾರ್, ಖುದ್ದಾಮ್ ಮತ್ತು ಲಜ್ನಾದಲ್ಲಿ ಅಂಗಸಂಸ್ಥೆಗಳ ಚುನಾವಣೆಗಳು ನಡೆಯಬೇಕಾಗಿರುವುದರಿಂದ ಈ ಸಂಘಟನೆಗಳ ಸದಸ್ಯರು ಯಾರೇ ಮಜ್ಲಿಸ್-ಎ-ಇಂತಿಖಾಬ್ (ಚುನಾವಣಾ ಸಮಿತಿ)ಯ ಸದಸ್ಯರಾಗುವವರು ತಮ್ಮ ಮತದಾನದ ಹಕ್ಕನ್ನು ಅಲ್ಲಾಹನ ಆಜ್ಞೆಯ ಪ್ರಕಾರ ಬಳಸಬೇಕು ಮತ್ತು ಪ್ರಾರ್ಥನೆಯ ನಂತರ ಮತ್ತು ನ್ಯಾಯದ ದೃಷ್ಟಿಯಲ್ಲಿ ಉತ್ತಮ ವ್ಯಕ್ತಿಯನ್ನು ಆಯ್ಕೆ ಮಾಡಿ ತಮ್ಮ ಶಿಫಾರಷನ್ನು ಖಲೀಫರಲ್ಲಿ ಮಾಡಬೇಕು.

ಈ ಕರ್ತವ್ಯವನ್ನು ನಾವು ನ್ಯಾಯಯುತವಾಗಿ ನಿರ್ವಹಿಸಿದರೆ, ಜಮಾಅತ್‌ನ ಅಭಿವೃದ್ಧಿಯಲ್ಲಿ ನಮ್ಮ ಪಾತ್ರವು ಸಕಾರಾತ್ಮಕವಾಗಿರುತ್ತದೆ ಮತ್ತು ಅಲ್ಲಾಹನ ಪ್ರಸನ್ನತೆಯನ್ನು ಪಡೆಯುತ್ತೇವೆ.

ಅದರೊಂದಿಗೆ ನಾನು ಹುದ್ದೆದಾರರಿಗೆ ಅವರ ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸಲು ಬಯಸುತ್ತೇನೆ. ಖಂಡಿತವಾಗಿಯು ಜಮಾಅತ್ತಿನ ಹುದ್ದೆದಾರರು ಎಂದು ಆಯ್ಕೆ ಮಾಡಲಾಗಿದೆ ಆದರೆ ಅವರು ಯಾವಾಗಲೂ ತಮ್ಮ ಜವಾಬ್ದಾರಿಗಳನ್ನು ಅರಿತುಕೊಳ್ಳಬೇಕು ಮತ್ತು ಅಲ್ಲಾಹನು ನಮಗೆ ಸೇವೆ ಮಾಡುವ ಅವಕಾಶವನ್ನು ನೀಡಿದ್ದಾನೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು, ಆದ್ದರಿಂದ ನಾವು ಅಲ್ಲಾಹನ ಅನುಗ್ರಹಗಳನ್ನು ಪಡೆಯಲು ಎಲ್ಲ ರೀತಿಯ ಸ್ವಾರ್ಥ ಉದ್ದೇಶಗಳಿಂದ ದೂರವಿದ್ದುಕೊಂಡು ಸೇವೆಗಳನ್ನು ಈಡೇರಿಸಬೇಕು.

ಕೆಲವು ಹುದ್ದೇದಾರರ ವರ್ತನೆಗಳಲ್ಲಿ ವಿನಯವಂತಿಕೆ ಇಲ್ಲವೆಂಬ ದೂರುಗಳು ಲಭಿಸುತ್ತವೆ. ಹುದ್ದೆಯ ನಂತರ ಅಸಾಧಾರಣ ವ್ಯಕ್ತಿತ್ವದವರಂತೆ ಕಾಣಿಸಿಕೊಳ್ಳುತ್ತಿದ್ದಾರೆ ಎಂಬ ದೂರುಗಳಿವೆ.

ಫಿರ್‌ಔನ್‌ನ ಸ್ವಭಾವ ಹುಟ್ಟಿಕೊಂಡಿದೆ ಎಂದು ನಾನು ಹೇಳುವುದಿಲ್ಲ, ಆದರೆ, ಅವರು ತಮ್ಮನ್ನು ಹಿರಿಯರು ಎಂದು ಯೋಚಿಸಲು ಪ್ರಾರಂಭಿಸುತ್ತಾರೆ. ವಿಶೇಷವಾಗಿ ನಾವುನಿರ್ದೇಶನಗೊಂಡಿರುವ ಅಧಿಕಾರಿಗಳಲ್ಲಿ ಮತ್ತು ಅವರು ವಾಖಿಫೀನೆ ಝಿಂದಗಿಯರೂ ಆಗಿದ್ದಾರೆ ಅವರಲ್ಲಿ ಈ ವಿಷಯವು ಹುಟ್ಟಿಕೊಂಡಿದೆ ಎಂದರೆ ಅದು ಸಂಪೂರ್ಣವಾಗಿ ಅಸಹನೀಯವಾಗಿದೆ. ಕೆಲವು ವಾಖಿಫೀನೆ ಝಿಂದಗಿಯರಿಗೆ ಜನರಲ್ ಸೆಕ್ರೇಟರಿಯನ್ನಾಗಿ ನೇಮಿಸಲಾಗಿದೆ, ಅವರದ್ದು ದುರಹಂಕಾರಿ ವರ್ತನೆ ಎಂಬ ದೂರು ಇದೆ. ಅವರು ಸಲಾಮಿಗೆ ಕೂಡ ಉತ್ತರ ನೀಡುವುದಿಲ್ಲ. ಇಂತಹ ವರ್ತನೆ ತೋರಿಸುವವರು ತಮ್ಮ ಸುಧಾರಣೆ ಮಾಡಬೇಕು. ಎಲ್ಲ ಮಕ್ಕಳು ಮತ್ತು ದೊಡ್ಡವರೊಂದಿಗೆ ಬಹಳ ಪ್ರೀತಿ ಮತ್ತು ವಿನಯದಿಂದ ಭೇಟಿಯಾಗಬೇಕು. ನಿಮ್ಮನ್ನು ಜಮಾಅತಿನ ಸದಸ್ಯರ ಸೇವೆಗಾಗಿ ನಿಶ್ಚಯಿಸಲಾಗಿದೆ. ಅಧಿಕಾರದ ದರ್ಪ ತೋರಿಸಲು ನಿಶ್ಚಯಿಸಲಾಗಿಲ್ಲ.

ಮತ್ತು ಕೆಲವರು ಹೇಗಿದ್ದಾರೆ ಎಂದರೆ ಅವರು ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸುವುದಿಲ್ಲ. ಇಲ್ಲಿಯೂ ಕೆಲವು ಪ್ರಕರಣಗಳು ನನ್ನ ಕಡೆಯಿಂದ ವರದಿಗೆ ಹೋಗುತ್ತವೆ, ನಂತರ ಅವರಿಗೆ ನೆನಪಿಸುವವರೆಗೂ ಅವರು ತಮ್ಮ ಡ್ರಾಯರ್‌ನಲ್ಲಿಯೇ ಅದನ್ನು ಇಟ್ಟಿರುತ್ತಾರೆ ಮತ್ತು ಆರು ತಿಂಗಳು ಮತ್ತು ವರ್ಷಗಳ ನಂತರ ಅವರು ಕ್ಷಮೆಯಾಚಿಸುವ ಪತ್ರವನ್ನು ಬರೆದು ನಾವು ತಪ್ಪು ಮಾಡಿದ್ದೇವೆ ಎಂದು ಹೇಳುತ್ತಾರೆ. ನಾವು ಅವುಗಳನ್ನು

ಸಮಯಕ್ಕೆ ಪ್ರಕ್ರಿಯೆಗೊಳಿಸಲು ಸಾಧ್ಯವಾಗಲಿಲ್ಲ ಎಂದು. ಅವರು ಕೇಂದ್ರದ ಪತ್ರಗಳೊಂದಿಗೆ ಖಲೀಫರ ಪತ್ರಿಕೆಗಳೊಂದಿಗೆ ಅವರು ಹೀಗೆ ವರ್ತನೆಯಾಗಿದ್ದರೆ, ಅವರು ಜಮಾಅತ್‌ನ ಸಾಮಾನ್ಯ ಸದಸ್ಯರೊಂದಿಗೆ ಉತ್ತಮವಾಗಿ ವರ್ತಿಸುತ್ತಾರೆ ಎಂದು ಹೇಗೆ ನಿರೀಕ್ಷಿಸಬಹುದು? ಈ ಜನರು ತಮ್ಮನ್ನು ತಾವು ಸುಧಾರಿಸಿಕೊಳ್ಳಬೇಕು ಇಲ್ಲದಿದ್ದರೆ ಅವರನ್ನು ಸೇವೆಯಿಂದ ವಜಾಗೊಳಿಸಲಾಗುತ್ತದೆ.

ಹುದ್ದೆದಾರರಿಗೆ ಇತರ ಕೆಲವು ಜವಾಬ್ದಾರಿಗಳ ಬಗ್ಗೆಯೂ ಗಮನ ಸೆಳೆಯಲು ಬಯಸುತ್ತೇನೆ.

ಒಂದೇನೆಂದರೆ ತಮ್ಮೊಳಗೆ ವಿನಯವನ್ನು ಉಂಟುಮಾಡಿರಿ. ಒಪ್ಪಿಸಲಾದ ಯಾವುದೇ ಕೆಲಸವನ್ನು ಸರಿಯಾಗಿ ನಿರ್ವಹಿಸಲು ಪ್ರಯತ್ನಿಸಿರಿ ಮತ್ತು ಈ ಸೇವೆಯನ್ನು ಅತ್ಯುತ್ತಮವಾಗಿ ನಿರ್ವಹಿಸಲು ತಮ್ಮ ಎಲ್ಲ ಸಾಮರ್ಥ್ಯಗಳನ್ನು ಖರ್ಚು ಮಾಡಿರಿ.

ಅಲ್ಲಾಹನು ನಮ್ಮ ಮೇಲ್ನೋಟಗಾರನಾಗಿದ್ದಾನೆ ಮತ್ತು ಅವನು ನಮ್ಮ ಪ್ರತಿಯೊಂದು ಚಲನವಲನಗಳನ್ನು ನೋಡುತ್ತಿದ್ದಾನೆ ಎಂಬ ಯೋಚನೆ ಸದಾ ನಿಮ್ಮ ಮನಸ್ಸಿನಲ್ಲಿ ಇರಬೇಕು. ಯಾವುದಾದರೂ ಹುದ್ದೆ ಲಭಿಸಿದರೆ ನಾವು ಎಲ್ಲ ವಿಧದ ಬಂಧನಗಳಿಂದ ಸ್ವತಂತ್ರಗೊಂಡೆವು ಎಂದು ಭಾವಿಸಬೇಡಿರಿ. ಬದಲಾಗಿ ಈಗ ಅಲ್ಲಾಹನ ಹಿಡಿತಕ್ಕೆ ನೀವು ಹೆಚ್ಚು ಸಮೀಪವಾಗಿದ್ದೀರಿ ಎಂದು ಅರಿತುಕೊಳ್ಳಿರಿ. ಜನರು ನಿಮ್ಮನ್ನು ಚುನಾಯಿತಗೊಳಿಸಿರುವರು, ನಿಮ್ಮಲ್ಲಿ ಭರವಸೆ ಇಟ್ಟುಕೊಂಡು ಖ಼ಲೀಫತುಲ್ ಮಸೀಹ್‌ರು ನಿಮಗೆ ಸೇವೆ ಮಾಡಲು ಮಂಜೂರಾತಿ ನೀಡಿರುವರು. ಆದ್ದರಿಂದ ಈ ಭರವಸೆಯನ್ನು ಈಡೇರಿಸಲು ನಾವು ಪ್ರಯತ್ನಿಸಬೇಕು. ನಿಮ್ಮ ಎಲ್ಲ ಸಾಮರ್ಥ್ಯಗಳನ್ನು ಈ ಸೇವೆಯನ್ನು ಅತ್ಯುತ್ತಮಗೊಳಿಸಲು ಖರ್ಚು ಮಾಡಬೇಕು. ಈ ಚಿಂತೆ ಇದ್ದರೆ ಮಾತ್ರ ಸರಿಯಾಗಿ ಕೆಲಸ ಮಾಡುವ ಉತ್ಸಾಹ ಉಂಟಾಗುವುದು ಮತ್ತು ಜಮಾಅತಿನ ಸದಸ್ಯರ ಸಹಕಾರ ಸಹ ಲಭಿಸುವುದು. ಕೆಲವು ವಿಭಾಗಗಳಲ್ಲಿ ಜಮಾಅತಿನ ಸದಸ್ಯರು ಸಹಕರಿಸುವುದಿಲ್ಲವೆಂದು ಹೆಚ್ಚಿನ ಹುದ್ದೇದಾರರು ದೂರುತ್ತಾರೆ. ಯಾರನ್ನು ಸ್ವತಃ ಜನರು ಸೇವೆಗಾಗಿ ಆಯ್ಕೆ ಮಾಡಿರುವರೋ ಅವರೊಂದಿಗೆ ಸಹಕರಿಸಬೇಕು ಎಂಬುದು ನಿಸ್ಸಂಶಯವಾಗಿಯೂ ಜನರ ಹೊಣೆಗಾರಿಕೆಯಾಗಿದೆ. ಆದರೆ ಅದರ ಜೊತೆಗೆ ತಮ್ಮ ಅತ್ಯುತ್ತಮ ಮಾದರಿಯನ್ನು ಸ್ಥಾಪಿಸುವುದು ಹುದ್ದೇದಾರರ ಕೂಡ ಕರ್ತವ್ಯವಾಗಿದೆ. ಈಗ ಓರ್ವ ಹುದ್ದೆದಾರರ ಬಗ್ಗೆ ಆತನು ಸರಿಯಾದ ಆಮದಿನ ಮೆಲೆ ಚಂದ ನೀಡುವುದಿಲ್ಲ ಅಥವಾ ಕಡಿಮೆ ದರದಲ್ಲಿ ಚಂದ ನೀಡಲು ಅನುಮತಿಯೂ ಸಹ ಪಡೆಯಲು ಬಯಸುವುದಿಲ್ಲ ಎಂದು ರಿಪೋರ್ಟ್ ಲಭಿಸಿದೆ. ಅಂತಹ ವ್ಯಕ್ತಿ ಇತರರಿಗೆ ಯಾವ ರೀತಿಯ ಉದಾಹರಣೆಯನ್ನು ನೀಡುತ್ತಾನೆ? ಆರ್ಥಿಕ ತ್ಯಾಗ ಮಾಡಲು ಇತರರನ್ನು ಆತನು ಹೇಗೆ ಕೇಳುತ್ತಾನೆ? ಹೀಗಾಗಿ ನಿಮ್ಮ ವೈಯಕ್ತಿಕ ಮಾದರಿಗಳು ಬಹಳ ಮುಖ್ಯವಾಗಿದೆ. ಬಹಳಷ್ಟು ಇಸ್ತಿಗ್‌಼ಫಾರ್ ಮಾಡುವ, ಅಲ್ಲಾಹನ ತಸ್ಬೀಹ್ ಮಾಡುವ ಮತ್ತು ತಮ್ಮ ಸ್ಥಿತಿಗಳ ಬಗ್ಗೆ ಅವಲೋಕನ ನಡೆಸಬೇಕಾದ ಆವಶ್ಯಕತೆಯಿದೆ.

ಒಬ್ಬ ತರ್‌ಬಿಯತ್ ಸೆಕ್ರಟರಿ ಐದು ಹೊತ್ತಿನ ನಮಾಝ಼ನ್ನು ಅನುಷ್ಠಿಸುವುದಿಲ್ಲವೆಂದಾದರೆ ಅವನು ಇತರರೊಡನೆ ನಮಾಝ಼್ ನಿರ್ವಹಿಸಲು ಹೇಗೆ ತಾನೆ ಹೇಳಬಲ್ಲನು? ಅದೇ ರೀತಿಯಲ್ಲಿ, ಒಬ್ಬ ವಾಖಿಫೀನೆ ಝಿಂದಗಿ ಮತ್ತು ಮುರಬ್ಬಿ ಸ್ವತಃ ನವಾಫಿಲ್‌ಗಳನ್ನು ಅನುಷ್ಠಿಸುವ ಬಗ್ಗೆ ಗಮನ ಹರಿಸದಿದ್ದರೆ ಜಮಾಅತ್ತಿನ  ಸದಸ್ಯರಿಗೆ ಆರಾಧನೆಯ ಕಡೆ ಗಮನ ನೀಡಲು ಹೇಗೆ ಸಲಹೆ ನೀಡುತ್ತಾನೆ. ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರು ನಮ್ಮ ಗಮನವನ್ನು ಸೆಳೆದಿದ್ದಾರೆ ಎಂದರೆ ಓರ್ವ ಗೈರ್ ಅಹ್ಮದಿ ಮೌಲವಿಯು ಸಲಹೆ ನೀಡುತ್ತಾನೆ, ಆದರೆ ಆತನ ಕಾರ್ಯಗ:ಳು ಆತನ ಸಲಹೆಗಳಿಗೆ ಅನುಗುಣವಾಗಿಲ್ಲ, ಆದ್ದರಿಂದ ಆತನ ಮಾತುಗಳು ಯಾವುದೇ ಪರಿಣಾಮ ಬೀರುವುದಿಲ್ಲ.

(ಮಲ್‌ಫೂಝ಼ಾತ್, ಸಂಪುಟ–1, ಪುಟ–67, 1984)

ಆದ್ದರಿಂದ ನಮಗೆ, ಪ್ರತಿ ಕ್ಷಣವನ್ನು ಬಹಳ ಕಾಳಜಿಯಿಂದ ಕಳೆಯಬೇಕಾಗಿದೆ. ಪ್ರತಿ ಹೆಜ್ಜೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಇದು ಸಂಭವಿಸಿದಾಗ ಮಾತ್ರ ನಾವು ನಮ್ಮ ಆಮಾನತ್ತುಗಳನ್ನು ಪೂರೈಸಲು ಸಾಧ್ಯವಾಗುತ್ತದೆ.

ತರ್‌ಬಿಯತ್ ಸೆಕ್ರಟರಿಗಳು ತಮ್ಮ ಉನ್ನತ ಮಾದರಿಗಳನ್ನು ತೋರಿಸುತ್ತಾ ಪ್ರೀತಿ ಮತ್ತು ಸ್ನೇಹದಿಂದ ಜಮಾಅತಿನ ಸದಸ್ಯರ ತರಬೇತಿ ಮಾಡುವುದಾದರೆ ಒಂದು ಕ್ರಾಂತಿಕಾರಿ ಬದಲಾವಣೆ ಉಂಟುಮಾಡಬಹುದು.

ಪ್ರತಿಯೊಬ್ಬ ಹುದ್ದೇದಾರ ತಮ್ಮ ವಿಭಾಗವನ್ನು ಉತ್ತಮಗೊಳಿಸಲಿಕ್ಕಾಗಿ ಕನಿಷ್ಠ ಪಕ್ಷ ಎರಡು ರಕಅತ್ ನಫ್‌ಲ್ ನಮಾಝ಼ನ್ನು ನಿರ್ವಹಿಸಬೇಕು.

ತರಬೇತಿ ವಿಭಾಗ ಸಕ್ರಿಯಗೊಂಡರೆ ಇತರ ವಿಭಾಗಗಳು ಶೇಕಡ ಎಪ್ಪತ್ತರಷ್ಟು ಸ್ವತಃ ಕೆಲಸಮಾಡಲು ತೊಡಗುವುವು.

ಆದ್ದರಿಂದ ನಾವು ಸದಾ ನೆನಪಿಸಲ್ಲಿಟ್ಟುಕೊಳ್ಳಬೇಕಾದ ವಿಷಯವೇನೆಂದರೆ ಹುದ್ದೇದಾರರು ತಮ್ಮ ಮಾದರಿಗಳನ್ನು ಸ್ಥಾಪಿಸಬೇಕು. ವಿಶೇಷವಾಗಿ ಜಮಾಅತಿನ ಅಮೀರ್, ಸದರ್ ಮತ್ತು ತರ್‌ಬಿಯತ್ ಸೆಕ್ರಟರಿಗಳು. ಇತರರು ಕೂಡ ಮಾದರಿಯನ್ನು ತೋರಿಸಬೇಕು. ಇತರರು ಮಾಡದಿದ್ದರೆ ಯಾವುದೇ ತೊಂದರೆಯಿಲ್ಲ ಎಂದಲ್ಲ ಇದರ ಅರ್ಥ. ಹುದ್ದೇದಾರರ ಗಮನವನ್ನು ವಿಶೇಷವಾಗಿ ಸೆಳೆಯುವುದರ ಅರ್ಥ ಇತರರು ತಮ್ಮ ಮಾದರಿಗಳನ್ನು ತೋರಿಸದಿದ್ದರೆ ಏನೂ ತೊಂದರೆಯಿಲ್ಲ ಎಂದಲ್ಲ. ಪ್ರತಿಯೊಬ್ಬರು ತಮ್ಮ ಮಾದರಿಗಳನ್ನು ತೋರಿಸಿದರೆ ಮಾತ್ರ ಜಮಾಅತಿನ ಪ್ರಗತಿ ಸರಿಯಾದ ರೀತಿಯಲ್ಲಿ ಆಗುವುದು. ಮಾದರಿ ತೋರಿಸುವುದರಿಂದ ಬಹಳ ವ್ಯತ್ಯಾಸ ಉಂಟಾಗುತ್ತದೆ. ಪ್ರತಿಯೊಬ್ಬ ಹುದ್ದೆದಾರನ ಕಾರ್ಯಗಳು ವ್ಯತ್ಯಾಸವನ್ನುಂಟುಮಾಡುತ್ತವೆ. ಸೆಕ್ರೇಟರಿ ಮಾಲ್ ಸ್ವತಃ ಜಾಗರೂಕತೆಯಿಂದ ಚಂದಗಳನ್ನು ಪಾವತಿಸದಿದ್ದರೆ, ನಾನು ಹೇಳಿದಂತೆ ಆತನು ಇತರರಿಗೆ ಏನು ಹೇಳುತ್ತಾನೆ ಮತ್ತು ಅವನ ಮಾತಿನಲ್ಲಿ ಹೇಗೆ ಅನುಗ್ರಹವಿರುತ್ತದೆ? ತಬ್ಲೀಗ್‌ನ ಸೆಕ್ರೇಟರಿಯು ತಬ್ಲೀಗ್ ಮಾಡುವ ಹಕ್ಕನ್ನು ಈಡೇರಿಸದಿದ್ದರೆ, ಜನರು ಜಮಾಅತ್ ಅನ್ನು ತಬ್ಲೀಗ್‌ಗೆ ಹೇಗೆ ಸಜ್ಜುಗೊಳಿಸುತ್ತಾನೆ? ಹಾಗಾಗಿ ಪ್ರತಿಯೊಂದು ಕ್ಷೇತ್ರವೂ ಮುಖ್ಯವಾಗಿದೆ. ಅಂತೆಯೇ, ಅಂಗಸಂಸ್ಥೆಗಳ ಸದರ್‌ಗಳ ಸ್ಥಾನಗಳು ಮತ್ತು ಇತರ ಹುದ್ದೆದಾರರ ಸ್ಥಾನಗಳು ಪ್ರಮುಖವಾಗಿವೆ.

ಉಪ ಸಂಸ್ಥೆಗಳಲ್ಲಿಯೂ ಪ್ರತಿ ಹಂತದಲ್ಲೂ ತನ್ನನ್ನು ತಾನು ಕ್ರಿಯಾಶೀಲಗೊಳಿಸಿಕೊಳ್ಳಬೇಕು.

ಕೆಲವು ಜಾಗಗಳಲ್ಲಿ ಲಜ್ನ ಸದರರ ಬಗ್ಗೆ ಅವರ ವರ್ತನೆಗಳು ಸರಿಯಲ್ಲ ಎಂಬ ದೂರುಗಳು ಬರುತ್ತವೆ. ಕೆಲವರು ನವ ಅಹ್ಮದಿಯರೊಡನೆ ಉತ್ತಮವಾಗಿ ವರ್ತಿಸುವುದಿಲ್ಲ. ಅವರನ್ನು ತಮ್ಮೆಡೆಗೆ ಸೆಳೆಯುವುದಕ್ಕೆ ಬದಲಾಗಿ ಅವರನ್ನು ಓಡಿಸಲು ಕಾರಣಕರ್ತರಾಗುತ್ತಾರೆ. ನಾವು ನಿಮ್ಮ ಸುಧಾರಣೆ ಮಾಡುವೆವು ಎಂದು ಬಹಳ ತಪ್ಪಾದ ರೀತಿಯಲ್ಲಿ ಹೇಳಲಾಗುತ್ತದೆ. ನನ್ನ ಪ್ರಕಾರ ಇಂತಹ ಸದರರು ಸ್ವತಃ ತಮ್ಮ ಸುಧಾರಣೆ ಮಾಡಬೇಕಾಗಿದೆ. ಕೆಲವು ಜನರ ಬಳಿ ಹುದ್ದೆಗಳು ಸ್ಥಾಯಿಯಾಗಿ ನೆಲೆನಿಲ್ಲುವ ಕಾರಣದಿಂದ ಹೀಗೆ ಆಗುತ್ತದೆ. ಯಾರು ಸದರ್ ಆಗಲು ಯೋಗ್ಯರೆಂದೂ ಯಾರು ಅಯೋಗ್ಯರೆಂದೂ ಲಜ್ನಗಳು ಚುನಾವಣೆ ಸಮಯದಲ್ಲಿ ಗಮನಿಸುವುದಿಲ್ಲ. ಇದರ ಕಾರಣದಿಂದ ಕೆಡುಕುಗಳು ಉಂಟಾಗುತ್ತವೆ. ಅನಂತರ ದೂರುಗಳು ಬರುತ್ತವೆ. ಕೆಡುಕುಗಳು ಉಂಟಾಗುವಾಗ ಜನರ ವಿಶ್ವಾಸ ಎಡವಿ ಬೀಳಲು ಆರಂಭವಾಗುತ್ತದೆ. ಆದ್ದರಿಮದ ಆಯ್ಕೆ ಮಾಡುವವರು ಸ್ವತಃ ತಮ್ಮ ಓಟನ್ನು ನ್ಯಾಯದಿಂದ ಮತ್ತು ಅಲ್ಲಾಹನ ಮೇಲೆ ಭಯವಿರಿಸಿಕೊಂಡು ನೀಡಿದರೆ ಅನಂತರ ದೂರುಗಳು ಇರಬಾರದು ಆದ್ದರಿಂದ ಚುನಾವಣೆಯ ಸಮಯದಲ್ಲಿ ಹುದ್ದೆಗೆ ಅರ್ಹರಾದವರನ್ನು ಆಯ್ಕೆ ಮಾಡಿರಿ. ಹಾಗಾದರೆ ದೂರುಗಳು ಕೊನೆಗೊಳ್ಳುವುದು. ಇಲ್ಲದಿದ್ದರೆ ಸುಧಾರಣೆ ಮಾಡಲು ಸಾಧ್ಯವಲ್ಲ. ಉಪಸಂಘಟನೆಗಳು ಕೂಡ ಪ್ರತಿಯೊಂದು ಹಂತದಲ್ಲಿ ಸ್ವತಃ ಸಕ್ರಿಯಗೊಳ್ಳಬೇಕು.

ಹುದ್ದೇದಾರರನ್ನು ನಿಶ್ಚಯಿಸುವುದು ಸ್ಟೇಜಿನಲ್ಲಿ ಕುಳಿತುಕೊಳ್ಳಲು ಅಲ್ಲ.

ಪ್ರತಿಯೊಬ್ಬ ಹುದ್ದೆದಾರರು ಸಾಮಾನ್ಯ ಕಾರ್ಯಕರ್ತನಾಗಿ ಕರ್ತವ್ಯ ನಿರ್ವಹಿಸಬೇಕು.

ಓರ್ವ ನವ ಅಹ್ಮದಿ ಮಹಿಳೆಯೊಬ್ಬರು ನನ್ನ ಬಳಿ ಪ್ರಸ್ತಾಪಿಸಿದರು. ಈ ಜಲ್ಸದಲ್ಲಿ ಹೊರಗಿನಿಂದ ಬಂದ ಮಹಿಳೆಯೊಬ್ಬರು ಇದ್ದರು, ಈ ಜಲ್ಸದಲ್ಲಿ ಒಂದು ವಿಷಯವು ನನ್ನನ್ನು ತುಂಬಾ ಪ್ರಭಾವಿಸಿತು. ಅದೇನೆಂದರೆ ಸದರ್ ಲಜ್ನ ಡಿಸಿಪ್ಲಿನ್ (ಶಿಸ್ತಿನ) ಕರ್ತವ್ಯದಿಂದ ಕರ್ತವ್ಯ ನೀಡುತ್ತಿರುವ ಹೆಣ್ಣುಮಕ್ಕಳೊಂದಿಗೆ ಡ್ಯೂಟಿ ನೀಡುತ್ತಿದ್ದನ್ನು ಕಂಡೆ. ಆದರೆ, ಇದು ಸದರ್‌ನ ಕರ್ತವ್ಯವಾಗಿತ್ತು. ಇದು ಅವರು ಮಾಡಿದ ಅಸಾಮಾನ್ಯ ಕೆಲಸವೇನಲ್ಲ. ಅವರು ಕರ್ತವ್ಯವನ್ನು ನೀಡದಿದ್ದರೆ ಮತ್ತು ಎಲ್ಲೆಡೆ ಮೇಲ್ವಿಚಾರಣೆ ಮಾಡದಿದ್ದರೆ, ಅವರು ಅಪರಾಧಿಯಾಗಿತ್ತಿದ್ದರು. ಸದರ್ ಈ ರೀತಿ ಕರ್ತವ್ಯವನ್ನು ನೀಡದಿದ್ದರೆ ಅಥವಾ ಪರಿಶೀಲಿಸದಿದ್ದರೆ, ಅವರು ತಮ್ಮ ಆಮಾನತ್ತಿನ ಹಕ್ಕನ್ನು ಪೂರೈಸುವುದಿಲ್ಲ, ಆದರೆ ಏನೇ ಇರಲಿ, ತಮ್ಮ ಆಮಾನತ್ತಿನ ಹಕ್ಕನ್ನು ಈಡೇರಿಸುವ ಅಧಿಕಾರಿಗಳು, ಅವರು ಇತರರ ಸುಧಾರಣೆಗೆ ಕಾರಣವಾಗುತ್ತಾರೆ ಮತ್ತು ಲಜ್ನಾದಲ್ಲಿ ಆಗುತ್ತಾರೆ.

ಸಮುದಾಯದ ನಾಯಕ ಸಮುದಾಯದ ಸೇವಕನಾಗಿ ತನ್ನ ಹೊಣೆಗಾರಿಕೆಯನ್ನು ನಿರ್ವಹಿಸಬೇಕು ಎಂಬ ಹಝ್ರ್‌಼ರತ್ ಪೈಗಂಬರ್(ಸ)ರ ಮಾತನ್ನು ನೆನಪಿಡಬೇಕು.

ಅದೇ ರೀತಿ ಸಾಮಾನ್ಯವಾಗಿ ಜಮಾಅತಿನ ಸದಸ್ಯರೊಡನೆ ವೈಯಕ್ತಿಕ

ಸಂಬಂಧವನ್ನು ಇರಿಸಬೇಕು ಎಂಬುದು ಹುದ್ದೇದಾರರ ಕರ್ತವ್ಯವಾಗಿದೆ.

ಅವರ ಸುಖ ದುಃಖಗಳಲ್ಲಿ ಭಾಗಿಯಾಗಬೇಕು. ಪರಸ್ಪರ ಸಹಾನುಭೂತಿ ಮತ್ತು ಕಾಳಜಿವಹಿಸಲಿಕ್ಕಾಗಿ ಜಮಾಅತಿನ ವ್ಯವಸ್ಥೆಯನ್ನು ಮಾಡಲಾಗಿದೆ ಎಂಬ ಭಾವನೆಯನ್ನು ಜನರಲ್ಲಿ ಮೂಡಿಸಬೇಕು. ಯಾರಾದರೂ ಅಧಿಕಾರಿ ಅಥವಾ ಯಾರಾದರೂ ಪ್ರಜೆ ಎಂಬ ರೀತಿಯಲ್ಲಿ ಅಲ್ಲ. ಯಾವನೇ ದೊಡ್ಡವನು ಅಥವಾ ಸಣ್ಣವನು ಎಂಬ ರೀತಿಯಲ್ಲೂ ಅಲ್ಲ.

ನಾವೆಲ್ಲರೂ ಒಂದೇ ಮತ್ತು ಸಹೋದರರು ಆಗಿದ್ದೇವೆ. ಹಝ್ರತ್ ಮಸೀಹ್ ಮೌಊದ್(ಅ)ರ ಮಿಶನನ್ನು ಪೂರ್ತಿ ಮಾಡಲು ತಮ್ಮ ತಮ್ಮ ಸಾಮರ್ಥ್ಯಗಳ ಪ್ರಕಾರ ಪ್ರಯತ್ನಿಸುವವರಾಗಿದ್ದೇವೆ. ಈ ಯೋಚನೆಯು ಜಮಾಅತಿನ ವ್ಯವಸ್ಥೆಯನ್ನು ಸುಂದರವಾದ ವ್ಯವಸ್ಥೆಯನ್ನಾಗಿ ಮಾಡುವುದು. ಅಲ್ಲಾಹನ ಸಾಮೀಪ್ಯಕ್ಕೆ ನಮ್ಮನ್ನು ಕೊಂಡು ಹೋಗುವಂತಹ ಯೋಚನೆ ಇದೇ ಆಗಿದೆ. ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಮುಅಕ್ಕಲ್ ಬಿನ್ ಯಸಾರ್ ಹೇಳುತ್ತಾರೆ: ಯಾರನ್ನು ಅಲ್ಲಾಹನು ಜನರ ಮೇಲ್ನೋಟಗಾರ ಮತ್ತು ಹೊಣೆಗಾರನಾಗಿ ಮಾಡಿರುವನೋ ಆತನು ಜನರ ಮೇಲ್ನೋಟದಲ್ಲಿ ಮತ್ತು ಕರ್ತವ್ಯ ನಿರ್ವಹಣೆಯಲ್ಲಿ ಹಾಗೂ ಅವರಿಗೆ ಒಳಿತುಗಳನ್ನು ಮಾಡುವುದರಲ್ಲಿ ಕೊರತೆ ಮಾಡುವುದಾದರೆ ಆತನ ಮರಣದ ನಂತರ ಅಲ್ಲಾಹನು ಆತನಿಗೆ ಸ್ವರ್ಗವನ್ನು ನಿಷಿದ್ಧಗೊಳಿಸುವನು ಮತ್ತು ಆತನಿಗೆ ಸ್ವರ್ಗವನ್ನು ದಯಪಾಲಿಸಲಾರನು. (ಸಹೀಹ್ ಬುಖಾರಿ, ಕಿತಾಬುಲ್ ಅಹ್ಕಾಮ್, ಹದೀಸ್-7150, 7151) ಒಟ್ಟಿನಲ್ಲಿ ಇದು ಬಹಳ ದೊಡ್ಡ ಎಚ್ಚರಿಕೆಯಾಗಿದೆ. ಬಹಳ ಭಯಪಡಬೇಕಾದ ಮತ್ತು ಚಿಂತಿಸಬೇಕಾದ ಸಂಗತಿಯಾಗಿದೆ.

ಮತ್ತೊಂದು ವರದಿಯಲ್ಲಿ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು: ನಿಮ್ಮಲ್ಲಿ ಪ್ರತಿಯೊಬ್ಬರೂ ಮೇಲ್ವಿಚಾರಕರಾಗಿದ್ದೀರಿ ಮತ್ತು ನಿಮ್ಮ ವಿಷಯಗಳ ಬಗ್ಗೆ ಕೇಳಲಾಗುತ್ತದೆ. ಇದು ಸುದೀರ್ಘವಾದ ವರದಿಯಾಗಿದೆ ಮತ್ತು ಅನ್ಯ ಸ್ಥಳಗಳು, ಮೇಲ್ವಿಚಾರಕರ ಬಗ್ಗೆಯೂ ಸಹ ಇಲ್ಲಿ ಉಲ್ಲೇಖಿಸಲಾಗಿದೆ, ಆದರೆ ನನಗೆ ಸೂಕ್ತವಾದದ್ದನ್ನು ನಾನು ಪ್ರಸ್ತುತ ಪಡಿಸುತ್ತೇನೆ. ಅಮೀರ್ ಕೂಡ ಮೇಲ್ವಿಚಾರಕರಾಗಿದ್ದಾರೆ ಎಂದು ಅವರು(ಸ) ಹೇಳಿದ್ದಾರೆ. (ಸಹೀಹ್ ಬುಖಾರಿ, ಕಿತಾಬುಲ್ ಅಹ್ಕಾಮ್....... ಹದೀಸ್-7138) ಅಂದರೆ ಹುದ್ದೆದಾರರೂ ಸಹ. ಇದರಲ್ಲಿ ಹುದ್ದೆದಾರರೂ ಸಹ ಮೇಲ್ವಿಚಾರಕರಾಗಿದ್ದಾರೆ ಮತ್ತು ಪ್ರತಿಯೊಬ್ಬರನ್ನು ಅವರ ವಿಷಯಗಳ ಬಗ್ಗೆ ಕೇಳಲಾಗುತ್ತದೆ. ಪ್ರಜೆಗಳು ಆಳುವ ಜನರಲ್ಲ ಬದಲಿಗೆ ಅವರಿಗೆ ಸಹಾಯ ಮಾಡುವ, ಸುಧಾರಿಸುವ, ಸುಧಾರಿಸುವ ಜವಾಬ್ದಾರಿಯನ್ನು ನೀಡಲಾಗಿದೆ.

ಹೀಗೆ ಅದೇ ಹದೀಸ್‌ನಲ್ಲಿ, ಪತಿ ತನ್ನ ಮನೆಯ ಮೇಲ್ವಿಚಾರಕರಾಗಿದ್ದಾರೆ, ಮಹಿಳೆ ತನ್ನ ಮಕ್ಕಳ ಮೇಲ್ವಿಚಾರಕರಾಗಿದ್ದಾಳೆ ಎಂದು ಉದಾಹರಣೆ ನೀಡಲಾಗಿದೆ. (ಸಹೀಹ್ ಅಲ್-ಬುಖಾರಿ, ಕಿತಾಬ್ ಅಲ್-ಅಹ್ಕಾಮ್, ಅಧ್ಯಾಯ ಕುಲಿಲ್ಲಾಹು ತಆಲಾ ವ ಅತೀಉರ್ರಸೂಲ್......, ಹದೀಸ್-7138) ಆಳ್ವಿಕೆಗಾಗಿ ಮೇಲ್ವಿಚಾರಕರಲ್ಲ. ಅವರಿಗೆ ತರಬೇತಿ ನೀಡಲು, ಅವರ ಸುಧಾರಣೆಗೆ ಯೋಜನೆಗಳನ್ನು ರೂಪಿಸಲು, ಅವರ ಅಗತ್ಯಗಳನ್ನು ಪೂರೈಸಲು ಅವರ ಮೇಲ್ವಿಚಾರಕರಾಗಿದ್ದಾರೆ. ಹಗಾಗಿ, ಅವರು ಈ ಜವಾಬ್ದಾರಿಯನ್ನು ಪೂರೈಸದಿದ್ದರೆ, ಹಝ್ರತ್ ಪೈಗಂಬರ್(ಸ) ಅವರ ಅಧ್ಯಾಪನೆಗಳ ಪ್ರಕಾರ, ಸ್ವರ್ಗವು ನಿಷಿದ್ಧವಾಗುತ್ತದೆ. ಆದ್ದರಿಂದ ಮೇಲ್ವಿಚಾರಕರಾಗಿ, ಹುದ್ದೆದಾರರನ್ನಾಗಿ ಮಾಡಿದವರು ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸದೇ ಕೇವಲ ತಮ್ಮ ಪ್ರದೇಶದಲ್ಲಿ ಖಿಲಾಫತ್ ಪ್ರತಿನಿಧಿಗಳಾಗಿದ್ದರೆ, ತಥಾಕಥಿತ ಪ್ರತಿನಿಧಿಗಳು ಖಲೀಫ‌ರನ್ನು ದೋಷಿಸುವವರಾಗಿದ್ದಾರೆ ಮತ್ತು ಖಲೀಫರನ್ನು ಅಪರಾಧಿಯನ್ನಾಗಿ ಮಾಡುವವರಾಗಿದ್ದಾರೆ.

ನಾನು ಉದಾಹರಣೆಯಲ್ಲಿ ಹೇಳಿದಂತೆ, ರಿಪೋರ್ಟ್ಸ್‌ಗಳನ್ನು ಪ್ರತಿ ಮಾಸ ಕಳುಹಿಸುವುದಿಲ್ಲ. ಈಗ ಅಂತಹವರ ಬಗ್ಗೆ ನನ್ನ ಬಳಿ ಬೇರೆ ಪರಿಹಾರವಿಲ್ಲ, ಅವರು ತಮ್ಮನ್ನು ತಾವು ಸುಧಾರಿಸಿಕೊಳ್ಳದಿದ್ದರೆ, ಅವರನ್ನು ಸೇವೆಯಿಂದ ವಜಾಗೊಳಿಸಬೇಕು ಮತ್ತು ನಾನು ಅವರ ಪಾಪಗಳಲ್ಲಿ ಮತ್ತೆ ಭಾಗಿಯಾಗುವುದಿಲ್ಲ. ಹಾಗಾಗಿ ನಾನು ಅಲ್ಲಾಹನ ಬಳಿ ಮಗ್‌ಫಿರತ್ ಅನ್ನು (ಕ್ಷಮೆಯನ್ನೂ) ಕೋರುತ್ತೇನೆ. ಒಟ್ಟಿನಲ್ಲಿ ನಾನು ಕೂಡ ಇಸ್ತಿಗ್‌ಫಾರ್ ಮಾಡುತ್ತೇನೆ. ಇಂತಹ ಜನರು ಕೂಡ ಅಲ್ಲಾಹನಲ್ಲಿ ಕ್ಷಮೆಯಾಚನೆ ಮಾಡಲಿ ಮತ್ತು ತಮ್ಮ ಸುಧಾರಣೆ ಮಾಡಲಿ. ತಮ್ಮ ಹೊಣೆಗಾರಿಕೆಗಳನ್ನು ಅರಿತುಕೊಂಡು ತಮ್ಮ ಕೆಲಸಗಳನ್ನು ಮಾಡುವ ಸಮರ್ಥರಾದ ಸಹಾಯಕರು ಅಹ್ಮದಿಯಾ ಖಿಲಾಫತಿಗೆ ಯಾವಾಗಲೂ ಲಭಿಸುತ್ತಾ ಇರುವಂತೆ ಅಲ್ಲಾಹನು ಮಾಡಲಿ.

ಮುಸ್ಲಿಮರ ಸಾಮೂಹಿಕ ವ್ಯವಹಾರಗಳಿಗೆ ಯಾರು ಜವಾಬ್ದಾರರಾಗಿದ್ದರೂ, ಜನರ ಅಗತ್ಯಗಳನ್ನು ಪೂರೈಸುವವರೆಗೆ ಅಲ್ಲಾಹನು ಅವನ ಅಗತ್ಯಗಳನ್ನು ಮತ್ತು ಗುರಿಗಳನ್ನು ಪೂರೈಸುವುದಿಲ್ಲ ಎಂದು ಹಝ್ರತ್ ಪೈಗಂಬರ್(ಸಲ್ಲಲ್ಲಾಹು ಅಲೈಹಿವ ಸಲ್ಲಮ್) ಹೇಳಿದರು.

ಆದ್ದರಿಂದ ಈ ಜವಾಬ್ದಾರಿಯು ಖಲೀಫರಿಗೆ ಸೇರಿರುವಾಗ, ಅದು ಜಮಾಅತ್ತಿನ ಹುದ್ದೆದಾರರಿಗೂ ಸೇರಿದೆ ಅವರು ತಮ್ಮ ತಮ್ಮ ಜಮಾಅತ್‌ಗಳಲ್ಲಿ ಖಲೀಫರ ಪ್ರತಿನಿಧಿಗಳಾಗಿದ್ದಾರೆ ಇದು ಹುದ್ದೆದಾರರ ಮೇಲಿನ ದೊಡ್ಡ ಜವಾಬ್ದಾರಿಯಾಗಿದೆ. ಆಮಿಲದ ಮೀಟಿಂಗುಗಳಲ್ಲಿ ಭಾಗಿಯಾಗಿ ತಮ್ಮ ಅಭಿಪ್ರಾಯವನ್ನು ಹೇಳಿಕೊಂಡು ಮಾತ್ರ ನಾವು ನಮ್ಮ ಕರ್ತವ್ಯವನ್ನು ಈಡೇರಿಸಿದೆವು ಎಂದು ಭಾವಿಸುವುದು ಸಾಕಾಗುವುದಿಲ್ಲ. ಜನರ ಒಳಿತಿಗಾಗಿ ಯೋಜನೆಗಳನ್ನು ಮಾಡುವುದು ಮತ್ತು ಅದರ ಪ್ರಕಾರ ಕೆಲಸಮಾಡಿಸುವುದು ಅತ್ಯಂತ ಮುಖ್ಯವಾದ ಸಂಗತಿಯಾಗಿದೆ. ಲಭಿಸುವ ಸೌಕರ್ಯದೊಳಗೆ ಇದ್ದುಕೊಂಡು ಅತ್ಯುತ್ತಮ ಯುಕ್ತಿಯನ್ನು ಅನುಷ್ಠಾನಕ್ಕೆ ತಂದು ಜನರ ಆವಶ್ಯಕತೆಗಳ ಬಗ್ಗೆ ಕಾಳಜಿವಹಿಸಬೇಕು. ಇದಕ್ಕಾಗಿ ಲೋಕದ ಅಗತ್ಯಗಳನ್ನು ಪೂರೈಸಲು ಉಮೂರೆ ಆಮ್ಮ ಇಲಾಖೆ ಇದೆ ಮತ್ತು ಶೋಬ ಸನ್‌ಅತ್ ವ ತಿಜಾರತ್ (ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ) ಇದೆ ಅದೇ ರೀತಿ ಉಪ ಸಂಸ್ಥೆಗಳು ಇದಕ್ಕಾಗಿ ತಮ್ಮ ಸಕ್ರಿಯ ಪಾತ್ರವನ್ನು ವಹಿಸಬೇಕು. ನಿಸ್ಸಂದೇಹವಾಗಿಯೂ ನಮ್ಮಲ್ಲಿ ಸಂಪನ್ಮೂಲಗಳು ಕಡಿಮೆ ಇವೆ ಆದರೆ ನಮ್ಮಲ್ಲಿರುವುದನ್ನು ಉತ್ತಮವಾಗಿ ಬಳಸಿಕೊಂಡು ಸರಿಯಾದ ಯೋಜನೆಯೊಂದಿಗೆ ಉತ್ತಮವಾಗಿ ಅನೇಕರನ್ನು ಸಹಾಯ ಮಾಡಬಹುದು.

ಇತ್ತೀಚಿಗೆ ರಿಶ್ತ ನಾತಾ ವಿಭಾಗ ಬಹಳ ದೊಡ್ಡ ಚ್ಯಾಲೇಂಜನ್ನು ಎದುರಿಸುತ್ತಿದೆ.

ಆದ್ದರಿಂದ ವಿಸ್ತಾರವಾದ ಯೋಜನೆಯೊಂದಿಗೆ ಕೆಲಸ ಮಾಡುವ ಆವಶ್ಯಕತೆಯಿದೆ. ಜಮಾಅತಿನ ಸಂಘಟನೆ ಮತ್ತು ಅದರ ಉಪಸಂಘಟನೆಗಳು ಸೇರಿಕೊಂಡು ಕೆಲಸಮಾಡಬೇಕಾಗಿದೆ. ಈ ಸಂಬಂಧವಾಗಿಯೂ ತರ್‌ಬಿಯತ್ ವಿಭಾಗವನ್ನು ಸಕ್ರಿಯಗೊಳಿಸಬೇಕಾದ ಆವಶ್ಯಕತೆಯಿದೆ.

ನಮ್ಮ ಯುವಕರ ಸರಿಯಾದ ತರಬೇತಿ ನಡೆದರೆ, ನಾವು ಹಝ್ರತ್ ಪೈಗಂಬರ್(ಸ) ಅವರ ಈ ಉಪದೇಶವನ್ನು ಮುಂದಿರಿಸಿಬೇಕು ಅಂದರೆ ವಿವಾಹದ ವಿಷಯಗಳಲ್ಲಿ ಸಂಪತ್ತು, ಕುಟುಂಬ, ಸೌಂದರ್ಯಕ್ಕೆ ಬದಲಾಗಿ ನಾವು ದೀನಿಗೆ ಪ್ರಾಮುಖ್ಯತೆ ನೀಡಬೇಕು. (ಸಹೀಹ್ ಬುಖಾರಿ, ಕಿತಾಬುನ್ನಿಕಾಹ್, ಹದೀಸ್-5090)

ಇದು ನಮ್ಮ ಆದ್ಯತೆಯಾಗಿದ್ದರೆ, ಹುಡುಗರು ಮತ್ತು ಹುಡುಗಿಯರು ಇಬ್ಬರೂ ತಮ್ಮ ಧಾರ್ಮಿಕ ಪರಿಸ್ಥಿತಿಗಳನ್ನು ಸುಧಾರಿಸಲು ಮತ್ತು ಸರ್ವಶಕ್ತ ಅಲ್ಲಾಹನೊಂದಿಗೆ ಸಂಪರ್ಕ ಸಾಧಿಸಲು ಬಯಸುತ್ತಾರೆ ಮತ್ತು ಈ ರೀತಿಯಾಗಿ ನಾವು ನಮ್ಮ ಮುಂದಿನ ಪೀಳಿಗೆಯನ್ನು ರಕ್ಷಿಸಲು ಸಾಧ್ಯವಾಗುತ್ತದೆ, ಇಲ್ಲದಿದ್ದರೆ ಇಂದು ದಜ್ಜಾಲ್ ಆಡುತ್ತಿರುವ ತಂತ್ರಗಳನ್ನು ಸಣ್ಣ ಪ್ರಯತ್ನಗಳಿಂದ ತಪ್ಪಿಸಿಕೊಳ್ಳುವುದು ತುಂಬಾ ಕಷ್ಟವಾಗುತ್ತದೆ. ಇದಕ್ಕಾಗಿ ಬಹಳ ವಿಸ್ತಾರವಾದ ಯೋಜನೆ ರೂಪಿಸಬೇಕು. ಆದ್ದರಿಂದ, ಪ್ರತಿಯೊಬ್ಬ ಹುದ್ದೆದಾರರು ಮೊದಲು ತನ್ನ ಸ್ವಂತ ಮನೆಯನ್ನು ಸುಧಾರಿಸಬೇಕಾಗಿದೆ, ನಂತರ ಧರ್ಮವನ್ನು ಪ್ರಪಂಚದ ಮೇಲೆ ಆದ್ಯತೆ ನೀಡುವ ನಮ್ಮ ಪ್ರತಿಜ್ಞೆಯು ಪ್ರತಿಜ್ಞೆ ಮಾತ್ರ ಇರಬಾರದು ಬದಲಿಗೆ ನಮ್ಮಲ್ಲಿ ಪ್ರತಿಯೊಬ್ಬರು ಅದನ್ನು ಅನುಸರಿಸುವವರಾಗಬೇಕು ಹಾಗಾದರೆ ಮಾತ್ರ ನಾವು ದಜ್ಜಾಲ್ ಅನ್ನು ಎದುರಿಸಲು ಸಾಧ್ಯವಾಗುತ್ತದೆ. ನಮ್ಮ ಪೀಳಿಗೆಗಳನ್ನು ಉಳಿಸಿಕೊಳ್ಳುವವರಾಗುತ್ತೇವೆ. ನಮ್ಮ ವಾಗ್ದಾನಗಳನ್ನು ರಕ್ಷಿಸುವವರಾಗುತ್ತೇವೆ, ಅದರ ಹಕ್ಕುಗಳನ್ನು ಈಡೇರಿಸುವವರಾಗುತ್ತೇವೆ ಮತ್ತು ತಮ್ಮ ಆಮಾನತ್ತುಗಳ ಹಕ್ಕನ್ನು ಈಡೇರಿಸುವವರಾಗುತ್ತೇವೆ. ಆದ್ದರಿಂದ ಪ್ರಪಂಚದ ಎಲ್ಲಾ ಜಮಾಅತ್‌ಗಳ ರಾಷ್ಟ್ರೀಯ ಮತ್ತು ಸ್ಥಳೀಯ ಅಧಿಕಾರಿಗಳು ಮತ್ತು ಉಪ-ಸಂಘಟನೆಗಳು ತಮ್ಮ ಆಮಾನತ್ತುಗಳನ್ನು ಪೂರೈಸಲು ಸಾಕಷ್ಟು ಚಿಂತನೆ ಮತ್ತು ಕ್ರಿಯಾ ಯೋಜನೆಗಳನ್ನು ರೂಪಿಸುವ ಅಗತ್ಯವಿದೆ.

ನಾನು ಉಮೂರೆ ಆಮ್ಮದ ಕೆಲಸದ ಬಗ್ಗೆ ಸಂಕ್ಷಿಪ್ತ ಉದಾಹರಣೆಯನ್ನು ನೀಡಿದ್ದೇನೆ.

ಉಮೂರೆ ಆಮ್ಮ ವಿಭಾಗ ಕೂಡ ಬಹಳ ಮುಖ್ಯವಾದ ವಿಭಾಗವಾಗಿದೆ. ಜನರಿಗೆ ಶಿಕ್ಷೆ ನೀಡುವುದು ಮತ್ತು ಕಠಿಣವಾಗಿ ಜನರನ್ನು ಎಚ್ಚರಿಸುವುದು ಈ ವಿಭಾಗದ ಕೆಲಸವಾಗಿದೆ ಎಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ. ಇದು ಮಾತ್ರ ಅವರ ಕೆಲಸವಲ್ಲ ಎಂದು ಈ ವಿಭಾಗದಲ್ಲಿ ಕೆಲಸ ಮಾಡುವವರಿಗೆ ಗೊತ್ತಿರಬೇಕು. ಈ ಕೆಲಸ ಅದರ ಒಂದು ಭಾಗ ಮಾತ್ರವಾಗಿದೆ. ಹೇಗಿದ್ದರೂ ಕಠಿಣವಾಗಿ ಎಚ್ಚರಿಸುವುದು ಅವರ ಕೆಲಸವಲ್ಲ. ಅತ್ಯಂತ ನಿರ್ಣಾಯಕ ಘಟ್ಟದಲ್ಲಿ ಮಾತ್ರ ಇದು ಅಗತ್ಯವಾಗಿರುತ್ತದೆ. ಆಗಲೇ ಹಾಗೆ ಮಾಡಲು ಶಿಫಾರಸ್ಸು ಕೊಡಲಾಗುತ್ತದೆ. ತರ್‌ಬಿಯತ್ ವಿಭಾಗ

ಸಕ್ರಿಯಗೊಂಡರೆ ಜಮಾಅತಿನ ಸದಸ್ಯರ ಪರಸ್ಪರ ಜಗಳಕ್ಕೆ ಸಂಬಂಧಿಸಿದ ಉಮೂರೆ ಆಮ್ಮದ ಅನೇಕ ಸಮಸ್ಯೆಗಳು ಸ್ವತಃ ಬಗೆಹರಿಯುವುದು.

ಮತ್ತು ಕೆಲವೆಡೆ ತರಬೇತಿ ವಿಭಾಗವು ಜಮಾಅತ್‌ನ ವ್ಯಕ್ತಿಗಳೊಂದಿಗೆ ವಿಶೇಷ ಸಂಬಂಧವನ್ನು ರಚಿಸುವ ಮೂಲಕ ಈ ನಿಟ್ಟಿನಲ್ಲಿ ಪ್ರಯತ್ನ ನಡೆಸಿದೆ, ಆದ್ದರಿಂದ ಜನರ ದೂರುಗಳನ್ನು ಈ ಪ್ರಯತ್ನದಿಂದ ದೂರವಿಟ್ಟು ವ್ಯವಸ್ಥೆಯ ಮೇಲಿನ ಅಪನಂಬಿಕೆ ದೂರವಾಯಿತು, ಅವರು ಸಹ ಜಮಾಅತ್‌ನ ನಿರ್ಧಾರಗಳನ್ನು ಗೌರವಿಸಿದ್ದಾರೆ ಮತ್ತು ಅದನ್ನು ಗೌರವದಿಂದ ಸ್ವೀಕರಿಸಿದ್ದಾರೆ ಅದೇ ರೀತಿ ವಿರೋಧಿಗಳ ಕಪಟವಿಶ್ವಾಸಿಗಳ ಅಥವಾ ಕೆಟ್ಟ ಜನರ ಲಾಭ ಪಡೆಯಲು ಬಯಸಿದ ವಿರೋಧಿಗಳ ಪ್ರಯತ್ನಗಳು ವಿಫಲವಾದವು. ಆದ್ದರಿಂದ ಕೆಲವು ಸಂದರ್ಭಗಳಲ್ಲಿ ತರಬೇತಿ ಮತ್ತು ಉಮೂರೆ ಆಮ್ಮದ ಇಲಾಖೆಗಳು ಒಟ್ಟಾಗಿ ಕೆಲಸ ಮಾಡುವ ಅವಶ್ಯಕತೆಯಿದೆ.

ನಾನು ಹೇಳಿದಂತೆ ಉಮೂರೆ ಆಮ್ಮದ ಕೆಲಸವು ಬಹಳ ವಿಶಾಲವಾಗಿದೆ. ಜಮಾಅತ್ತಿನಲ್ಲಿ ಆರ್ಥಿಕ ಸ್ಥಿರತೆಯನ್ನು ಉಂಟುಮಾಡುವ ಕಾರ್ಯಕ್ರಮಗಳನ್ನು ರಚಿಸುವುದು ಅವರ ಕೆಲಸವಾಗಿದೆ. ಉದ್ಯೋಗ ಮತ್ತು ಇತರ ಉದ್ಯೋಗದ ಮೂಲಗಳಿಗಾಗಿ ಜಮಾಅತ್‌ನ ಸದಸ್ಯರಿಗೆ ಮಾರ್ಗದರ್ಶನ ಮತ್ತು ಸಹಾಯ ಮಾಡುವುದು ಅವರ ಕೆಲಸವಾಗಿದೆ. ಜನಸೇವೆಯ ಕೆಲಸಗಳನ್ನು ನಿರ್ವಹಿಸುವುದು ಅವರ ಕೆಲಸವಾಗಿದೆ. ಪ್ರೀತಿಯಿಂದ ತಿಳುವಳಿಕೆ ಇತ್ಯಾದಿಗಳ ಮೂಲಕ ಸಂಘರ್ಷಗಳನ್ನು ಕೊನೆಗೊಳಿಸುವುದು ಅವರ ಕೆಲಸವಾಗಿದೆ. ಆದರೆ, ಖಝಾ ವಿಭಾಗದ ವಿಷಯಗಳಲ್ಲಿ ಉಮೂರೆ ಆಮ್ಮದವರು ಹಸ್ತಕ್ಷೇಪ ಮಾಡುವುದು ಅವರ ಕೆಲಸವಲ್ಲ. ಅವರಿಗೆ ಯಾವುದೇ ಸಾರ್ವಜನಿಕ ವ್ಯವಹಾರಗಳಲ್ಲಿ ತೀರ್ಪನ್ನು ನೀಡುವುದು ಅವರ ಕೆಲಸವಲ್ಲ.

ಹೌದು, ಖಝಾದ (ನ್ಯಾಯಾಲಯದ) ತೀರ್ಪನ್ನು ಜಾರಿಗೊಳಿಸುವುದು ಅವರ ಕೆಲಸವಾಗಿದೆ, ಆದರೆ ತೀರ್ಪಿನ ನಂತರ ಯಾವುದೇ ಪಕ್ಷವು ಅದನ್ನು ಪಾಲಿಸಲು ಆಲಸ್ಯವುಂಟು ಮಾಡಿದರೆ ಉಮೂರೆ ಆಮ್ಮದವರು ಅಂತಹವರನ್ನು ಬಹಳ ನಮ್ರತೆಯಿಂದ ಅವರನ್ನು ಆ ತೀರ್ಪನ್ನು ಪಾಲಿಸಲು ತಿಳಿ ಹೇಲಬೇಕು ಅವರಿಗೆ ನೀವು ನಿಮ್ಮ ಧರ್ಮವನ್ನು ಹಾಳು ಮಾಡುತ್ತಿದ್ದೀರ? ಸ್ವಲ್ಪ ಪ್ರಾಪಂಚಿಕ ಹಿತಾಸಕ್ತಿಗಾಗಿ ನಿಮ್ಮ ಧರ್ಮವನ್ನು ಏಕೆ ಹಾಳುಮಾಡುತ್ತೀರಿ? ಎಂದು ತಿಳಿ ಹೇಳಬೇಕು. ಮತ್ತು ಅಂತಹ ಜನರು ನನ್ನ ಸಮಯವನ್ನು ಸಹ ವ್ಯರ್ಥ ಮಾಡುತ್ತಾರೆ. ಅವರು ತಪ್ಪು ಮಾಡಿದರೂ ಮತ್ತೆ ಮತ್ತೆ ನನಗೆ ಬರೆಯುತ್ತಲೇ ಇರುತ್ತಾರೆ. ಎಷ್ಟೋ ಜನರಿಗೆ ವಿವರಿಸಿದರೆ ಅವರು ಅರ್ಥಮಾಡಿಕೊಳ್ಳುತ್ತಾರೆ. ಆದಾಗ್ಯೂ, ಜನರಿಗೆ ಶಿಕ್ಷೆ ನೀಡುವುದು ಉಮೂರೆ ಆಮ್ಮದ ಕೆಲಸವಲ್ಲ. ಬದಲಾಗಿ ಶಿಕ್ಷೆಯಿಂದ ರಕ್ಷಿಸಬೇಕು ಮತ್ತು ಅದಕ್ಕಾಗಿ ಅವರು ಸಾಧ್ಯವಾದ ಎಲ್ಲ ಪ್ರಯತ್ನಗಳನ್ನು ಮಾಡಬೇಕು.

ಮತ್ತು ಎಲ್ಲಾದರೂ ತಪ್ಪು ನಡೆಯುವುದನ್ನು ಕಂಡರೆ ಅಥವಾ ಜಮಾಅತ್ತಿನ ಹಿತಾಸಕ್ತಿಗೆ ಧಕ್ಕೆ ತರಬಹುದು ಎಂದು ಅರ್ಥ ಮಾಡಿಕೊಂಡರೆ ಕೂಡಲೇ ತರಬೇತಿಯ ಇಲಾಖೆಯೊಂದಿಗೆ ಸೇರಿ ಮುರಬ್ಬಿಯರ ನೆರವು ಪಡೆದು, ಅಲ್ಲಿ ಜಮಾಅತ್ತಿನ ಹಿತ ಕಾಪಾಡಿದರೆ, ಅಲ್ಲಿ ಜನರ ಈಮಾನ್ ಉಳಿಸುವ ಪ್ರಯತ್ನವೂ ನಡೆಯುತ್ತದೆ.

ಕೆಲವೊಮ್ಮೆ ಹುದ್ದೆದಾರರ ವರ್ತನೆಯಿಂದ ವ್ಯವಸ್ಥೆಯ ಬಗ್ಗೆ ಅನುಮಾನ ಮೂಡುತ್ತದೆ. ಉದಾಹರಣೆಗೆ, ಯಾರಾದರೂ ತಮ್ಮ ಅಗತ್ಯಗಳಿಗಾಗಿ ಖಲೀಫರಿಗೆ ಅರ್ಜಿ ಸಲ್ಲಿಸಿದ್ದರೆ, ನಂತರ ಜಮಾಅತ್ ಅಥವಾ ಅಮೀರ್ ಜಮಾಅತ್ ಅಥವಾ ಉಮೂರೆ ಆಮ್ಮ ಅಥವಾ ಸದರ್ ಅಥವಾ ಅದು ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದ್ದರೆ, ಅವರು ಏಕೆ ಅರ್ಜಿ ಸಲ್ಲಿಸಲಿಲ್ಲ ಎಂದು ಅವರ ಕಾರ್ಯಕರ್ತರು ಆ ವ್ಯಕ್ತಿಯೊಂದಿಗೆ ಕಟ್ಟುನಿಟ್ಟಾಗಿ ವರ್ತಿಸುತ್ತಾರೆ. ನಮ್ಮ ಮೂಲಕ. ಮತ್ತು ಕೇಂದ್ರದಿಂದ ವರದಿ ಕೇಳಿದರೆ ತಕ್ಷಣವೇ ವರದಿ ಕಳುಹಿಸುವ ಬದಲು ವಿಷಯ ಸ್ಥಗಿತಗೊಳ್ಳುತ್ತದೆ. ನಂತರ ಯಾವುದೇ ಪ್ರತಿಕ್ರಿಯೆ ಇಲ್ಲದಿದ್ದಾಗ, ಈ ವ್ಯಕ್ತಿಯು ಅನುಮಾನಾಸ್ಪದನಾಗುತ್ತಾನೆ ಮತ್ತು ನಮ್ಮ ವಿನಂತಿಗಳನ್ನು ಸ್ವೀಕರಿಸಲಾಗಿಲ್ಲ ಎಂದು ನೇರವಾಗಿ ಜನರು ನನಗೆ ಬರೆಯುತ್ತಾರೆ. ದೀರ್ಘಾವಧಿಯವರೆಗೆ ಪ್ರಕ್ರಿಯೆಗೊಳಿಸದ ಅಪ್ಲಿಕೇಶನ್‌ಗಳು ವಿಶೇಷವಾಗಿ ಅವಮಾನವನ್ನು ಮೂಡಿಸುತ್ತದೆ. ನಮ್ಮ ಕೋರಿಕೆಯು ಖಲೀಫರ ಬಳಿ ತಲುಪಿಲ್ಲ ಎಂದು ಜನರು ಭಾವಿಸುತ್ತಾರೆ. ಅಂತಹ ಪರಿಸ್ಥಿತಿಯೂ ಸಂಭವಿಸುತ್ತದೆ. ಒಂದೆಡೆ, ನಮ್ಮನ್ನು ಏಕೆ ಕೇಳಲಿಲ್ಲ, ಮತ್ತೊಂದೆಡೆ, ನಮ್ಮನ್ನು ಕೇಳದ ಕಾರಣ ಅದನ್ನು ಪ್ರಕ್ರಿಯೆಗೊಳಿಸುವುದಿಲ್ಲ. ತದನಂತರ ಖಲೀಫರ ಮೇಲೆ ಮತ್ತು ಖಲೀಫರ ಕಚೇರಿಯ ಮೇಲೆ ಅನುಮಾನಗಳು ಉದ್ಭವಿಸುತ್ತವೆ. ಆದಾಗ್ಯೂ, ಇದೆಲ್ಲವೂ ತಪ್ಪಾಗಿದೆ.

ಖ಼ಲೀಫತುಲ್ ಮಸೀಹ್‌ರ ಆಫೀಸಿಗೆ ತಲುಪುವ ಪ್ರತಿಯೊಂದು ಪತ್ರವನ್ನು ತೆರೆದು ಓದಲಾಗುತ್ತದೆ ಮತ್ತು ಅದರ ಪ್ರಕಾರ ಆವಶ್ಯಕ ನಡೆವಳಿಕೆಯನ್ನು ಮಾಡಲಾಗುತ್ತದೆ ಎಂಬ ಸಂಗತಿಯನ್ನು ಜಮಾಅತಿನ ಸದಸ್ಯರೊಡನೆ ನಾನು ತಿಳಿಯಪಡಿಸುತ್ತೇನೆ. ಎಲ್ಲಾದರೂ ತಡವಾಗುತ್ತಿದ್ದರೆ ಅದು ಸಂಬಂಧಪಟ್ಟ ಜಮಾಅತಿನ ಕಡೆಯಿಂದ ಆಗಿರುತ್ತದೆ. ಹಾಗಾಗಿ ಜಮಾಅತ್‌ನ ಸದಸ್ಯರಿಗೆ ನಾನು ಹೇಳುವುದೇನೆಂದರೆ ಇಲ್ಲಿ ಬರುವ ಎಲ್ಲಾ ಪತ್ರಗಳು, ಇಲ್ಲಿಗೆ ಬಂದು ತಲುಪಿದರೆ ಅದನ್ನು ತೆರೆದು ಓದಲಾಗುತ್ತದೆ ಮತ್ತು ಅದರ ಮೇಲೆ ಕಾರ್ಯನಿರ್ವಹಿಸಲಾಗುತ್ತದೆ.

ಸಂಬಂಧಪಟ್ಟ ಇಲಾಖೆ ಅದಕ್ಕೆ ಉತ್ತರಿಸಲು ಬಹಳ ಸಮಯ ತೆಗೆದುಕೊಳ್ಳುತ್ತದೆ. ಈ ರೀತಿಯಾಗಿ ಜಮಾಅತಿನ ಸದಸ್ಯರು ಮತ್ತು ಖ಼ಲೀಫತುಲ್ ಮಸೀಹ್‌ರ ನಡುವೆ ದೂರವನ್ನು ಉಂಟುಮಾಡಲು ಈ ಹುದ್ದೇದಾರರು ಕಾರಣಕರ್ತರಾಗುತ್ತಾರೆ. ವ್ಯವಸ್ಥೆಯ ಬಗ್ಗೆ ಕೆಟ್ಟ ಆಲೋಚನೆಗಳನ್ನು ಉಂಟು ಮಾಡುವವರಾಗುತ್ತಾರೆ ಮತ್ತು ಹೀಗೆ ಸಂಬಂಧಪಟ್ಟ ಹುದ್ದೆದಾರರು ಅಪರಾಧಿಯಾಗುತ್ತಾರೆ. ಒಬ್ಬರ ವಿಶ್ವಾಸದೊಂದಿಗೆ ಆಟವಾಡುವ ಮೂಲಕ, ಅವನು ತನ್ನನ್ನು ಅಪರಾಧಿಯನ್ನಾಗಿ ಮಾಡುತ್ತಿದ್ದಾನೆ. ಹಾಗಾಗಿ ಅಂತಹವರು ಭಯಪಡಬೇಕು.

ನಿರ್ಗತಿಕ ಜನರಿಗೆ ಸಹಾಯ ಮಾಡುವ ಕೆಲಸ ಯಾವ ಹುದ್ದೇದಾರರಿಗೆ ಒಪ್ಪಿಸಲಾಗಿದೆಯೋ ಅವರು ವಿಶೇಷವಾಗಿಯೂ ನೆನಪಿಡಬೇಕಾದ ಸಂಗತಿಯೇನೆಂದರೆ, ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಖಂಡಿತವಾಗಿ ತಡಮಾಡಬೇಡಿರಿ. ಆಲಸ್ಯವನ್ನು ಕೂಡ ತೋರಿಸಬೇಡಿರಿ.

ನಿರ್ಗತಿಕ ಮತ್ತು ಬಡ ಜನರು ಬರುವಾಗ ತಮ್ಮ ಮನೆಯ ಬಾಗಿಲುಗಳನ್ನು ಒಬ್ಬ ನಾಯಕ ಅಥವಾ ಅಧಿಕಾರಿ ಮುಚ್ಚಿದರೆ ಆತನಿಗೆ ಏನಾದರೂ ಆವಶ್ಯಕತೆ ಬರುವಾಗ ಅಲ್ಲಾಹನು ಆಕಾಶದ ಬಾಗಿಲುಗಳನ್ನು ಮುಚ್ಚುವನು ಎಂದು ಹಝ್ರ಼ತ್ ಪೈಗಂಬರ್(ಸ) ಹೇಳಿರುವರು. (ಸುನನ್ ಅತ್ತಿರ್ಮಿಧಿ, ಅಬ್ವಾಬುಲ್ ಅಹ್ಕಾಮ್, ಹದೀಸ್–1332)

ಆದ್ದರಿಂದ ಇಂತಹ ಯೋಚನೆ ಇರಿಸುವ ಯಾವನಾದರೂ ಹುದ್ದೇದಾರ ಅಥವಾ ಆತನ ಆಫೀಸಿನಲ್ಲಿ ಇಂತಹ ಯಾವನಾದರೂ ಉದ್ಯೋಗಿ ಇದ್ದರೆ, ಆತನು ಅಲ್ಲಾಹನ ಮೇಲೆ ಭಯವಿರಿಸಿಕೊಂಡು ಜನರ ಆವಶ್ಯಕತೆಗಳನ್ನು ಬೇಗನೇ ಈಡೇರಿಸಬೇಕು. ಅರ್ಜಿಯನ್ನು ಪಡೆದುಕೊಂಡು ಡ್ರಾಯರ್‌ನಲ್ಲಿ ಇರಿಸುವುದು ಮತ್ತು ದೀರ್ಘಕಾಲದ ವರೆಗೆ ಕಾರ್ಯಾಚರಣೆ ನಡೆಸದೇ ಇರುವುದು ಬಹಳ ದೊಡ್ಡ ಅಪರಾಧವಾಗಿದೆ. ನೀವು ಎಲ್ಲಿದ್ದರೂ ಅಲ್ಲಾಹನ ಭಯವನ್ನು ಕೈಗೊಳ್ಳಿರಿ, ಜನರೊಂದಿಗೆ ಉತ್ತಮ ಸ್ವಭಾವ ಮತ್ತು ಸದ್ವರ್ತನೆಯೊಂದಿಗೆ ನಡೆದುಕೊಳ್ಳಬೇಕು ಎಂದು ಹಝ್ರ಼ತ್ ಪೈಗಂಬರ್(ಸ) ಹೇಳಿರುವರು.

(ಸುನನ್ ಅತ್ತಿಮಿರ್ಧಿ, ಅಬ್ವಾಬುಲ್ ಬಿರ್ರಿ ವಸ್ಸಿಲ, ಹದೀಸ್–1987)

ಅದೇ ರೀತಿ ಒಂದು ವರದಿಯಲ್ಲಿದೆ: ಹಝ್ರ಼ತ್ ಅಬೂಮೂಸಾ(ರ) ಮತ್ತು ಮುಆಧ಼್ ಬಿನ್ ಜಬಲ್(ರ)ರನ್ನು ಎರಡು ಬೇರೆ ಬೇರೆ ಜಾಗಗಳ ಕಡೆಗೆ ಅಧಿಕಾರಿಯನ್ನಾಗಿ ಮಾಡಿಕೊಂಡು ಹಝ್ರ಼ತ್ ಪೈಗಂಬರ್(ಸ) ಕಳುಹಿಸಿದರು. ಅವರಿಗೆ ಹಝ್ರ಼ತ್ ಪೈಗಂಬರ್(ಸ) ಹೀಗೆ ಉಪದೇಶ ನೀಡಿದರು: ಜನರ ಕೆಲಸವನ್ನು ಸುಲಭಗೊಳಿಸಿರಿ, ಪ್ರಯಾಸಗಳನ್ನು ಉಂಟುಮಾಡಬೇಡಿರಿ. ಪ್ರೀತಿ ಮತ್ತು ಸಂತೋಷವನ್ನು ಹರಡಿರಿ. ಹಗೆಯನ್ನು ಬೆಳೆಯಲು ಬಿಡಬೇಡಿರಿ. (ಸಹೀಹ್ ಬುಖಾರಿ, ಕಿತಾಬುಲ್ ಮಗ್ಹಾಜಿ, ಹದೀಸ್–4341, 4342)

ಈ ಉಪದೇಶವನ್ನು ಮಾರ್ಗದರ್ಶಿ ತತ್ವವಾಗಿ ಪ್ರತಿಯೊಬ್ಬ ಹುದ್ದೇದಾರ ತನ್ನ ಮುಂದೆ ಇರಿಸಬೇಕು. ಆದ್ದರಿಂದ ಹುದ್ದೆದಾರರು ಜಮಾಅತ್ತಿನ ಸದಸ್ಯರ ಸೇವೆ ಮಾಡುವ ಹಕ್ಕನ್ನು ಪೂರೈಸುವ ಮಾರ್ಗವಾಗಿದೆ ಮತ್ತು ಅವರ ವಿಶ್ವಾಸವನ್ನು ರಕ್ಷಿಸುವಲ್ಲಿ ಪಾತ್ರವನ್ನು ವಹಿಸಬಹುದು ಮತ್ತು ಜಮಾಅತ್ತಿನ ಐಕ್ಯತೆಯನ್ನು ಕಾಪಾಡುವಲ್ಲಿ ಮತ್ತು ಅವರ ಆಮಾನತ್ತುಗಳನ್ನು ಪೂರೈಸುವಲ್ಲಿ ತಮ್ಮ ಪಾತ್ರವನ್ನು ವಹಿಸಬಹುದು. ಹೀಗೆ ಸಂಭವಿಸಿದಾಗ, ಎಂತಹ ಸುಂದರವಾದ ಸಮಾಜವನ್ನು ರಚಿಸಲಾಗುವುದು ಎಂದರೆ ಅದು ಒಂದು ನಿಜವಾದ ಇಸ್ಲಾಮಿಕ್ ಸಮಾಜವಾಗಿದೆ. ಅದನ್ನು ಖಾಯೆಮ್‌ಗೊಳಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಆಗಮಿಸಿದ್ದರು ಮತ್ತು ನಾವು ಅವರನ್ನು ನೊಂಬಿ ಅವರ ಬೈಅತ್ ಮಾಡಿದ್ದೇವೆ.

ಹಾಗಾಗಿ, ಜಮಾಅತ್‌ನ ಸದಸ್ಯರು ಅವರನ್ನು ಆಯ್ಕೆ ಮಾಡಿದ್ದಾರೆ ಅಥವಾ ಭವಿಷ್ಯದಲ್ಲಿ ಅವರು ತಮ್ಮ ಅಮಾನತ್ತುಗಳನ್ನು ಪೂರೈಸಲು ಹಾಗೆ ಮಾಡುತ್ತಾರೆ ಎಂಬುದನ್ನು ಹುದ್ದೆದಾರರು ಯಾವಾಗಲೂ ನೆನಪಿಟ್ಟುಕೊಳ್ಳಬೇಕು, ಆದರೆ ಅವರು ತಮ್ಮ ಸ್ವಂತ ಆಲೋಚನೆಯಿಂದ

ಆಯ್ಕೆ ಮಾಡದಿದ್ದರೆ, ಮತದಾರರು ಸ್ವಂತ ಆಲೋಚನೆಯಿಂದ ಆಯ್ಕೆ ಮಾಡದಿದ್ದರೆ. ಈಗ ಅಲ್ಲಾಹನು ತಮಗೆ ವಹಿಸಿರುವ ಅಮಾನತ್ತನ್ನು ಪೂರೈಸುವುದು ಮತ್ತು ಅವರ ಕರ್ತವ್ಯಗಳನ್ನು ಸದುದ್ದೇಶದಿಂದ ನಿರ್ವಹಿಸುವುದು ಹುದ್ದೆದಾರರ ಕರ್ತವ್ಯವಾಗಿದೆ. ಸರ್ವಶಕ್ತನಾದ ಅಲ್ಲಾಹನ ಭಯವನ್ನು ನಿಮ್ಮ ಹೃದಯದಲ್ಲಿ ಇರಿಸಿ ಅದನ್ನು ಪೂರೈಸಿರಿ. ಸರ್ವಶಕ್ತನಾದ ಅಲ್ಲಾಹನ ಸಂತೃಪ್ತಿಯನ್ನು ಪಡೆಯಲು ಪಾವತಿಸಿರಿ. ಕಾಲಘಟ್ಟದ ಖಲೀಫರ ಸುಲ್ತಾನುನ್ನಸೀರ್ ಆಗಿ ಕಾರ್ಯ ನಿರ್ವಹಿಸಿರಿ. ಜನರ ವಿಶ್ವಾಸವನ್ನು ದೃಢಪಡಿಸಲು ಮತ್ತು ಅವರಿಗೆ ಪ್ರಯೋಜನವನ್ನು ನೀಡಲು ಸಾಧ್ಯವಾದಷ್ಟು ಪ್ರಯತ್ನಿಸಿ, ಮತ್ತು ನೀವು ಈ ಆಲೋಚನೆಯನ್ನು ಇಟ್ಟುಕೊಂಡು ಮತ್ತು ಈ ಆಲೋಚನೆಯೊಂದಿಗೆ ನಿಮ್ಮ ಕರ್ತವ್ಯಗಳನ್ನು ನಿರ್ವಹಿಸಿದಾಗ, ಸರ್ವಶಕ್ತನಾದ ಅಲ್ಲಾಹನು ನಿಮ್ಮ ಕಾರ್ಯಗಳನ್ನು ಅನುಗ್ರಹಿಸುತ್ತಾನೆ ಮತ್ತು ಪ್ರತಿ ಸಂದರ್ಭದಲ್ಲೂ ನಿಮಗೆ ಸಹಾಯ ಮಾಡುತ್ತಾನೆ. ಇಲ್ಲದಿದ್ದರೆ, ನಾವು ಧರ್ಮನಿಷ್ಠೆಯಿಂದ ವಿಮುಖರಾಗುತ್ತೇವೆ. ಸರ್ವಶಕ್ತ ಅಲ್ಲಾಹನಿಗೆ ದ್ರೋಹ ಮಾಡುವವರಾಗುತ್ತೇವೆ, ಕಾಲಘಟ್ಟದ ಖಲೀಫರನ್ನು ಸಹ ದ್ರೋಹ ಮಾಡುವವರಾಗುತ್ತೇವೆ ಮತ್ತು ಸರಿಯಾಗಿ ಅಥವಾ ತಪ್ಪಾಗಿ ನಂಬಿದವರ ನಂಬಿಕೆಗಳನ್ನು ಹಾನಿ ಮಾಡುವವರಾಗುತ್ತೇವೆ.

ಹಝ್ರತ್ ಮಸೀಹ್ ಮವೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಮುಮಿನ್ ತಮ್ಮನ್ನು ನಂಬುವವರ ಅಮಾನತ್ತುಗಳು ಮತ್ತು ವಾಗ್ದಾನಗಳನ್ನು ಗೌರವಿಸುತ್ತಾರೆ, ಅಂದರೆ, ಅವರು ಅಮಾನತ್ತುಗಳ ಪಾವತಿ ಮತ್ತು ವಾಗ್ದಾನಗಳ ನೆರವೇರಿಕೆಯ ಬಗ್ಗೆ ಧರ್ಮನಿಷ್ಠೆ ಮತ್ತು ಎಚ್ಚರಿಕೆಯ ಯಾವುದೇ ವಿವರವನ್ನು ಬಿಡುವುದಿಲ್ಲ. (ಝುಮೀವು ಬರಾಹೀನೆ ಅಹ್ಮದಿಯಾ, ಭಾಗ-5, ರೂಹಾನಿ ಖಝಾಈನ್, ಸಂಪುಟ-21, ಪುಟ-239-240)

ಮತ್ತೊಂದೆಡೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಮನುಷ್ಯನ ಜನ್ಮದಲ್ಲಿ ಎರಡು ರೀತಿಯ ಸೌಂದರ್ಯವಿದೆ. ಒಂದು ಒಳ್ಳೆಯ ವಿಷಯವೆಂದರೆ, ಒಬ್ಬ ವ್ಯಕ್ತಿಯು ಸರ್ವಶಕ್ತನಾದ ಅಲ್ಲಾಹನ ಎಲ್ಲಾ ರೀತಿಯ ಅಮಾನತ್ತುಗಳನ್ನು ಮತ್ತು ವಾಗ್ದಾನಗಳನ್ನು ಪೂರೈಸಲು ಕಾಳಜಿ ವಹಿಸಬೇಕು, ಅಂದರೆ ಆದ್ದರಿಂದ ಅವರಿಗೆ ಸಂಬಂಧಿಸಿದಂತೆ ಯಾವುದೇ ವಿಷಯವು ಕಳೆದುಹೋಗಬಾರದು ಎಂದು. ಇದು ಅವಶ್ಯಕವಾಗಿದೆ," ಅವರು ಹೇಳಿದರು, "... ಮನುಷ್ಯನು ಜೀವಿಗಳ ಅಮಾನತ್ತುಗಳು ಮತ್ತು ವಾಗ್ದಾನಗಳ ಬಗ್ಗೆ ಅದೇ ಗೌರವವನ್ನು ಹೊಂದಿರುವುದು ಸಹ ಅಗತ್ಯವಾಗಿದೆ. ಅಂದರೆ, ಅಲ್ಲಾಹನ ಹಕ್ಕುಗಳಲ್ಲಿ ಮತ್ತು ದಾಸರ ಹಕ್ಕುಗಳಲ್ಲಿ ತಖ್ವದಿಂದ ವರ್ತಿಸಿ, ಇದು ಸೌಂದರ್ಯದ ವಿಷಯವಾಗಿದೆ ಅಥವಾ ಆಧ್ಯಾತ್ಮಿಕ ಸೌಂದರ್ಯವಾಗಿದೆ ಎಂದು ಹೇಳಬಹುದು. (ಝುಮೀಮ ಬರಾಹೀನೆ ಅಹ್ಮದಿಯಾ, ಭಾಗ-5, ರೂಹಾನಿ ಖಝಾಈನ್, ಸಂಪುಟ-21, ಪುಟ 218)

ಒಟ್ಟಿನಲ್ಲಿ, ನಾವು ನಮ್ಮೊಳಗೆ ಆಧ್ಯಾತ್ಮಿಕ ಸೌಂದರ್ಯವನ್ನು ಉಂಟುಮಾಡಬೇಕು ಎಂಬ ಸಂಗತಿಯನ್ನು ಪ್ರತಿಯೊಂದು ಹುದ್ದೆದಾರ ನೆನಪಿನಲ್ಲಿ ಇಡಬೇಕು. ನಾವು, ಹುದ್ದೆದಾರರು, ಹಝ್ರತ್ ಮಸೀಹ್ ಮವೌಊದ್ ಅಲೈಹಿಸ್ಸಲಾಮ್ ಅವರ ಈ ಮಾತುಗಳಿಗೆ ಹೆಚ್ಚು ಸಂಬೋಧಿಸುತ್ತೇವೆ.

ಅಲ್ಲಾಹನು ನಮಗೆಲ್ಲರಿಗೂ ಅದರ ಸೌಭಾಗ್ಯ ನೀಡಲಿ.

...*...*...*...

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಆಕಾಶವೇ ಕಳಚಿಬಿದ್ದ ರೀತಿಯ ಅಳು ಅದಾಗಿದೆ. ದ'ೀಶ'ದ' ಸೌಂದರ್ಯ ಅದರಿಂದಿತ್ತು. ಇದು ಆಕೆಯ ಜನಾಝ ಆಗಿದೆ.

(ಬಾಖಿಯಾತ್ ಇಕ್ಬಾಲ್, ಸಂಯೋಜಿತ ಸಯ್ಯದ್ ಅಬ್ದುಲ್ ವಾಹಿದ್ ಮುಯೀನಿ, ಎಂ.ಎ, ಆಯಿನಾ ಅದಬ್, ಅನಾರ್‌ಕಲೀ ಲಾಹೋರ್ ಬಾರ್ ದುವಮ್, ಪುಟ-73,76,81,90)

"ಮುನ್ಸಿಫ್" ನ ಸಂಪಾದಕರನ್ನು ನೋಡಿ ಅಲ್ಲಮ ಇಕ್ಬಾಲ್ ರಾಣಿಯನ್ನು ಹೊಗಳುವುದರಲ್ಲಿ ಮಿತಿ ಮೀರಿ ಹೋಗಿದ್ದಲ್ಲದೆ ಆಕೆಯನ್ನು ದೇವರ ನೆರಳು ಎಂದೂ ಕರೆದಿದ್ದಾರೆ. ಅಹ್ಲೆ ಹದೀಸಿನ ಮಹಾಪಂಡಿತರು, ಸಜ್ಜನರು, ಶಮುಲ್ ಉಲಮಾ ಮೌಲಾನ ನಝೀರ್ ಅಹ್ಮದ್ ದೆಹಲ್ವಿ ಹೇಳುತ್ತಾರೆ:

"ಅಖಿಲ ಭಾರತದ ಸಮೃದ್ಧಿಯು ಹಿಂದೂ ಅಥವಾ ಮುಸ್ಲಿಮನಲ್ಲದ ವಿದೇಶಿ ಆಡಳಿತಗಾರ, ಯುರೋಪಿನ ಆಡಳಿತಗಾರ (ಬ್ರಿಟಿಷರೂ ಅಲ್ಲ, ಯುರೋಪಿನ ಇಚ್ಛೆಯೇ ಇರಲಿ) ಆದರೆ ದೇವರ ಅನಂತ ಕರುಣೆಯಿಂದ ಬ್ರಿಟಿಷ್ ಅರಸರು ಬಂದರು." (ಮೌಲಾನಾ ನಝೀರ್ ಅಹ್ಮದ್ ದೆಹ್ಲವಿಯವರ ಉಪನ್ಯಾಸಗಳ ಸಂಗ್ರಹ, ಪುಟ ಸಂಖ್ಯೆ 4, 5, 1890)

ಮತ್ತೆ ಅವರು ಹೇಳುತ್ತಾರೆ:

"ನಾನು ತನ್ನ ತಿಳುವಳಿಕೆಯ ಮಟ್ಟಿಗೆ ಭಾರತದ ಆ ಸಮಯದ ಆಡಳಿತಗಾರರ ಮೇಲೆ ದೃಷ್ಟಿ ಹಾಯಿಸುತ್ತಿದ್ದೆ ಮತ್ತು ಬರ್ಮಾ, ನೇಪಾಳ, ಅಫ್ಘಾನಿಸ್ಥಾನ ಅಲ್ಲದೆ ಫಾರಿಸ್, ಈಜಿಪ್ಟ್ ಮತ್ತು ಅರಬ್‌ರವರೆಗೆ ಭಾವನೆಗಳನ್ನು ಬೀಸುತ್ತಿದ್ದೆ. ಈ ಮೂಲೆಯಿಂದ ಆ ಮೂಲೆಯವರೆಗೆ ಒಂದೇ ಒಂದು ಜೀವಿ ಭಾರತದ ರಾಜರಾಗಿ ಮಾಡಲು ಬಯಸುತ್ತಿರಲಿಲ್ಲ. (ಅಂದರೆ ನಾನು ನನ್ನ ದೃಷ್ಟಿಯಲ್ಲಿ ರಾಜನಾಗಿ ಮಾಡಬೇಕಾದರೆ ಯಾರಿಗೆ ಮಾಡುತ್ತಿದ್ದೆ) ಆಡಳಿತಕ್ಕೆ ಅರ್ಹರಾದವರು ಆ ಸಮಯ ಯಾರು ಯೋಗ್ಯವಾಗಿರಲಿಲ್ಲ. ಅದರ ಹಕ್ಕುದಾರ ಆ ಸಮಯಕ್ಕೆ ಯಾರಾದರೂ ಇದ್ದರೆ, ಆ ಸಮಯಕ್ಕೆ ನನ್ನ ನಿರ್ಣಯ ಬ್ರಿಟಿಷರು ಎಂದಾಗಿತ್ತು. ಅವರೇ ಇದಕ್ಕೆ ಅರ್ಹರು, ಅವರದ್ದೇ ಸರ್ಕಾರ ಇರಬೇಕಾಗಿದೆ. (ಅದೇ ಪುಟ 26).

"ಚಟ್ಟಾನ್" ಪತ್ರಿಕೆಯ ಸಂಪಾದಕ ಶೂರ್ಶ್ ಕಾಶ್ಮೀರಿ ಸಾಹಿಬ್ ಬರೆಯುತ್ತಾರೆ:

ಘಟನೆಗಳ ಈ ಯುಗದಲ್ಲಿ ಜಿಹಾದ್‌ನ್ನು ನಿಷೇಧಗೊಳಿಸುವ ಬಗ್ಗೆ ವ್ಯಾಖ್ಯಾನಿಸುತ್ತ **"ಅತಿವುಲ್ಲಾಹ ವ ಅತಿವುರ್ರಸೂಲ ವ ಊಲಿಲ್ ಅಮ್ರಿ ಮಿನ್‌ಕುಮ್"** ಯ ಪ್ರತಿರೂಪ ಬ್ರಿಟಿಷರಾಗಿದ್ದರು ಎಂಬುವುದರಲ್ಲಿ ಆ ಸಮಯದ ಪ್ರಸಿದ್ಧ ಲೇಖಕರು ಡೆಪ್ಟಿ ನಝೀರ್ ಅಹ್ಮದ್ ಅವರ ಹೆಸರಾಗಿತ್ತು. (ಕಿತಾಬ್ "ಅತಾವುಲ್ಲಾ ಶಾ ಬುಖಾರಿ" ಪುಟ-135)

ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲ್ವಿ ಅವರ ಬ್ರಿಟಿಷ್ ಸರಕಾರ ಕುರಿತು ಭಾವನೆಗಳು ಹೀಗಿದ್ದವು.

"ರೋಮ್‌ನ ರಾಜ ಓರ್ವ ಇಸ್ಲಾಮಿ ರಾಜನಾಗಿದ್ದಾನೆ. ಆದರೆ ಶಾಂತಿ ಮತ್ತು ಉತ್ತಮ ಆಡಳಿತ ದೃಷ್ಟಿಯಿಂದ (ಧಾರ್ಮಿಕ ವಿಚಾರ ಬಿಟ್ಟು) ಬ್ರಿಟಿಷ್ ಸರಕಾರ ಸಹ ನಮ್ಮ ಮುಸಲ್ಮಾನರಿಗೆ ಕಡಿಮೆ ಹೆಮ್ಮೆಪಡುವಂತಹದ್ದೇನಲ್ಲ, ವಿಶೇಷವಾಗಿ ಅಹ್ಲೆ ಹದೀಸ್ ಅವರಿಗೆ ಈ ಸರಕಾರ ಶಾಂತಿ ಹಾಗೂ ಸ್ವಾತಂತ್ರ್ಯ ನೆಲೆಯಲ್ಲಿ ಈ ಸಮಯದ ಎಲ್ಲಾ ಸರಕಾರಗಳಿಂದ (ರೋಮ್, ಇರಾನ್, ಖರಾಸಾನ್) ಗಿಂತಲೂ ಗೌರವಯುತವಾಗಿದೆ. (ರಿಸಾಲಾ ಇಶಾಅತು ಸ್ಸನಾ, ಸಂಪುಟ-6, ಪುಟ-292, 293)

ನಂತರ ಅವರು ಹೇಳುತ್ತಾರೆ:

ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲ್ವಿ ಅವರ ಬ್ರಿಟಿಷ್ ಸರಕಾರ ಕುರಿತು ಭಾವನೆಗಳು ಹೀಗಿದ್ದವು.

"ರೋಮ್‌ನ ರಾಜ ಓರ್ವ ಇಸ್ಲಾಮಿ ರಾಜನಾಗಿದ್ದಾನೆ. ಆದರೆ ಶಾಂತಿ ಮತ್ತು ಉತ್ತಮ ಆಡಳಿತ ದೃಷ್ಟಿಯಿಂದ (ಧಾರ್ಮಿಕ ವಿಚಾರ ಬಿಟ್ಟು) ಬ್ರಿಟಿಷ್ ಸರಕಾರ ಸಹ ನಮ್ಮ ಮುಸಲ್ಮಾನರಿಗೆ ಕಡಿಮೆ ಹೆಮ್ಮೆಪಡುವಂತಹದ್ದೇನಲ್ಲ, ವಿಶೇಷವಾಗಿ ಅಹ್ಲೆ ಹದೀಸ್ ಅವರಿಗೆ ಈ ಸರಕಾರ ಶಾಂತಿ ಹಾಗೂ ಸ್ವಾತಂತ್ರ್ಯ ನೆಲೆಯಲ್ಲಿ ಈ ಸಮಯದ ಎಲ್ಲಾ ಸರಕಾರಗಳಿಂದ (ರೋಮ್, ಇರಾನ್, ಖರಾಸಾನ್) ಗಿಂತಲೂ ಗೌರವಯುತವಾಗಿದೆ. (ರಿಸಾಲಾ ಇಶಾಅತು ಸ್ಸನಾ, ಸಂಪುಟ-6, ಪುಟ-292, 293)

ಮೌಲಾನ ಝಫರ್ ಅಲಿ ಖಾನ್ ಸಾಹಿಬ್ ಅವರ ಕವನ ಸಂಗ್ರಹದಿಂದ ಈ ಸಾಲುಗಳನ್ನು ಗಮನಿಸಿ:

ಝಕಾ ಫರ್ತೆ ಅಖೀದತ್ ಸೇ ಮೇರಾ ಸರ್
ಹುಆ ಜಬ್ ತಝಹ King Emporor ಕಾ
ಜಲಾಲತ್ ಕೊ ಹೈ ಕ್ಯಾ ಕ್ಯಾ ನಾಝ್ ಉಸ್ ಪರ್
ಕೆ ಶಹಿನ್‌ಶಾಹ್ ಹೈ ವೋ ಬಹರ್ ವ ಬರ್ ಕಾ
ಝಹೇ ಖಿಸ್ಮತ್ ಜೋ ಹೋ ಇಕ್ ಗೋಶ ಹಾಸಿಲ್
ಹಮೆಂ ಉಸ್ಕೀ ನಿಗಾಹೆ ಫೈಝ್ ಅಸರ್ ಕಾ

(ಅಖ್ಬಾರ್ ಝಮೀನ್ದಾರ್ ಲಾಹೋರ್, 19, ಅಕ್ಟೋಬರ್ 1911)

ಅನುವಾದ: ಬ್ರಿಟಿಷರ ಸವಿಸ್ಮರಣೆಯಾದಾಗ ನಿಷ್ಠೆಯಿಂದ ನನ್ನ ಶಿರಬಾಗಿ ಹೋಗಿದೆ. ಅವರ ಪ್ರತಾಪವನ್ನು ಹೇಗೆ ಹೊಗಳಲಿ, ಅವರು ನೆಲ ಹಾಗೂ ಜಲದ ರಾಜರಾಗಿದ್ದಾರೆ. ಅವರ ಒಂದಿಷ್ಟು ಭಾಗವೇ ದಕ್ಕಿದರೆ ಸಾಕು, ಅವರ ಅನುಗ್ರಹಿತ ದೃಷ್ಟಿಯ ಪ್ರಭಾವವೇ ಸಾಕು.

"ನದ್ವತುಲ್ ಉಲಮಾಅ್" ಬುನಾದಿ ಸಹ ಬ್ರಿಟಿಷರೆ ಇಟ್ಟಿದ್ದಾರೆ. ಅಂದಹಾಗೆ ಅವರ ಪತ್ರಿಕೆ "ಅನ್ನದ್ವ" ಬರೆಯುತ್ತದೆ:

"ಗೌರಾನ್ವಿತ ಲೆಫ್ಟಿನೆಂಟ್ ಗೌವರ್‌ನರ್ ಬಹಾದುರ್ ಸಂಯುಕ್ತ ರಾಷ್ಟ್ರ ಅನುಮತಿಯಿಂದ ದಾರುಲ್ ಉಲೂಮ್ ನದ್ವತುಲ್ ಉಲಮಾಅ ಅಡಿಗಲ್ಲು ತಮ್ಮ ಕೈಯಿಂದ ಇರಿಸಿದ್ದರು. ಈ ಸಮಾರಂಭ 28 ನವೆಂಬರ್

1908 ರಂದು ಜಾರಿಗೆ ಬಂದಿತ್ತು. (ಅನ್ನದ್ವ ಡಿಸೆಂಬರ್ 1908, ಸಂಖ್ಯೆ-11, ಸಂಪುಟ-5, ಪುಟ-2)

ಆಧಾರವಾದ ಸಂಚಲಿತ ಸಂಚಿಕೆ, ಅದರ ಪುಟ ಸಂಖ್ಯೆ-4ರ ಮೇಲೆ ಅರಬಿ ವಿಳಾಸವಿದೆ. ಅದರಲ್ಲಿ ಸರ್ ಜಾನ್ ಬ್ರಿಸ್‌ಕಾಟ್ KCSIE ಯಿಂದ ನದ್ವದ ಅಡಿಗಲ್ಲು ಹಾಕಲು ಒಪ್ಪಿದ್ದಕ್ಕೆ ಕೃತಜ್ಞತೆ ಸಲ್ಲಿಸಲಾಗಿದೆ. (ಅದೇ)

ಇದನ್ನು ಪ್ರಸ್ತಾಪಿಸಿದ ನಂತರ, ಈಗ ಮುಂದಿನ ಭಾಗವನ್ನು ಪರಿಗಣಿಸುವುದು ಯೋಗ್ಯವಾಗಿದೆ. ಮುಸಲ್ಮಾನರು ಇದನ್ನು ಓದಿದರೆ ಬ್ರಿಟೀಷ್ ಗವರ್ನರ್ ಎಂಬ ಬುನಾದಿ ಹಾಕಲಾಗಿದೆ ಎಂದು ಏನು ಹೇಳುತ್ತಾರೆ, ಮುಂದೆ ಏನಾಗಬಹುದು? ಮತ್ತು ಅದರ ಗುರಿಗಳೇನು? ಅಂತೂ ಅವರು ಒಂದು ಅತ್ಯಮತ ಅಪಾಯಕರವಾದ ಮಾತನ್ನು ಹೇಳಿದರು. ಅವರು ಅದರಿಂದ ಒಂದಿಷ್ಟು ಲಜ್ಜೆಪಡಲಿಲ್ಲ. ಆ ಮಾತು ಎಲ್ಲಾ ಮುಸಲ್ಮಾನರ ಹೃದಯದ ಮೇಲೆ ಒಂದು ಅಪಾಯಕರವಾದ ಗಾಯವಾಗಿದೆ. ಓರ್ವ ಬ್ರಿಟಿಷನ ಕೈಯಿಂದ ಅಡಿಗಲ್ಲು ಹಾಕುವ ಪರವಾಗಿ ಮತ್ತು ಅದರ ಕಾರಣ ಪ್ರಸ್ತುತಪಡಿಸುತ್ತಾ ಏಕೆ ಹೀಗಾಯಿತು, ಹೇಳುತ್ತಾರೆ:

"ಇದು ಮೊದಲ ಸಂದರ್ಭವಾಗಿತ್ತು. ಒಂದು ಧಾರ್ಮಿಕ ಪಾಠಶಾಲದ ಅಡಿಗಲ್ಲು ಓರ್ವ ಅನ್ಯಧರ್ಮಿಯ ಕೈಯಿಂದ ಹಾಕಲಾಗುತ್ತಿತ್ತು. (ಅನ್ನದ್ವ ಲಖ್‌ನೌ, ಡಿಸೆಂಬರ್ 1908, ಪುಟ 1,2)

ನೌರೂಖು ಬಿಲ್ಲಾಹ್ ಮಿನ್ ಝಾಲಿಕ್, ಮಸ್ಜಿದೆ ನಬವಿಯ ಧರ್ಮಪೀಠಗಳನ್ನು ಸಹ ಕ್ರಿಶ್ಚಿಯನ್ನರು ನಿರ್ಮಿಸಿದ್ದಾರೆ, "ನದ್ವ" ವನ್ನು ಕ್ರಿಶ್ಚಿಯನ್ನರು ನಿರ್ಮಿಸಿದರೆ ಅದು ಏನು ವ್ಯತ್ಯಾಸವನ್ನು ಮಾಡುತ್ತದೆ, ಆದರೆ ಅದೇ ಸಮಯದಲ್ಲಿ, ನಾವು ಅದನ್ನು ಒಪ್ಪಿಕೊಳ್ಳಬೇಕಾಗಿತ್ತು:

**ವನಹ್‌ನು ಅಲಾ ಯಖೀನಿನ್ ಮಿನ್ ಅನ್ನಲ್ ಮುಸ್ಲಿಮೀನ ಕಮಾ ಯುಸ್ಲಿಮು ಅರ್ಘ್‌ಆನಹುಮ್ ಲಿಹುಕೂಮತಿಹಿಮ್ ಯರ್ಘೀದೂನ ಮಿನ್ ಹಾಉಲಾಯಿಲ್‌ಉಲಮಾಇನ್ನಾಶಿಈನ ತಾಅತನ್ ವನ್‌ಖಿಯಾದನ್ ಲಿಲ್ ಹುಕೂಮತಿ- ವಲ್‌ಆನ ನುಖದ್ದಿಮು ಇಲಾ ನುಖದ್ದಿಮು ಇಲಾ ಜನಾಬಿಕುಮ್ ಅರ್ಘ್‌ಕಾತ್ತಶಕ್ಕರಾತಿ ಹೈಸು ತುಫರ್ಘ್ಘಲ್‌ತುಮ್ ಅಲೈನಾ ಬಿಖಿತೀಅತಿನ್ ಮಿನಲ್‌ಅರ್ಘಿ ಲಿನರ್‌ಫಅ ಅಲೈಹಾ ಖಿವಾಯಿದಮದ್ರಸತಿನಾ"**

ಅನುವಾದ: ನಾವು ದೃಢವಾಗಿ ನಂಬಿದ್ದೇವೆ. ಹೇಗೆ ಮುಸಲ್ಮಾನರು, ಸರಕಾರದ ಅನುಸರಣೆ, ನಿಷ್ಠೆಯನ್ನು ಅನುಸರಿಸುತ್ತಾರೆ. ಅವರಿಂದ ಉಂಟಾಗುವ ಉಲಮಾಅ (ಎಂದರೆ ನದ್ವಯಿಂದ ವಿದ್ಯೆಪಡೆದ ವಿದ್ವಾಂಸರು) ಸರಕಾರದ ನಿಷ್ಠೆ ಅನುಸರಣೆಯಲ್ಲೂ ಮುಂದುವರೆಯಿತು. ಇದೀಗ ನಾನು ನಿಮ್ಮಲ್ಲಿ ಅತ್ಯಂತ ಪವಿತ್ರವಾದ ಭಾವನೆಗಳನ್ನು ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ನೀವು ನಮಗೆ ಭೂಮಿಯ ಒಂದು ಭಾಗವನ್ನು ದಯಪಾಲಿಸಿದ್ದೀರಿ. ಅದರಿಂದ ನಮಗೆ ಪಾಠಶಾಲ ನಿರ್ಮಿಸಲು ಸಾಧ್ಯವಾಯಿತು.

"ಅನ್ನದ್ವ" ಜುಲೈ 1908 ಸಂಪುಟ-5, ಪುಟ-1 ರಲ್ಲಿ ಈ ಮಾತು ಸ್ಪಷ್ಟವಾಗಿ ಹೇಳಲಾಯಿತು. ಅದರ ಉದ್ದೇಶಗಳೇನು, ಹೇಳುತ್ತಾರೆ:

"ನದ್ವ ಅಂದಹಾಗೆ ರಾಜಕೀಯದಿಂದ ಪ್ರತ್ಯೇಕವಾಗಿದೆ. ಆದರೆ ಇದರ ನಿಜವಾದ ಉದ್ದೇಶ ಉದಾರ ಮನಸ್ಸಿನ ಉಲಮಾಅ್‌ಗಳನ್ನು ಸೃಷ್ಟಿಸುವುದಾಗಿದೆ ಮತ್ತು ಈ ರೀತಿಯ ಪಂಡಿತರ ಇದು ಕರ್ತವ್ಯವು ಆಗಿದೆ. ಸರಕಾರದ ಅನುಗ್ರಹಗಳು ಕಾರುಣ್ಯಗಳು ಅವರು ತಿಳಿದಿರಬೇಕು. ಮತ್ತು ದೇಶದಲ್ಲಿ ಸರಕಾರದ ಪೈಕಿ ನಿಷ್ಠೆ ಪ್ರಮಾಣೀಕತೆಯ ಭಾವನೆಗಳನ್ನು ಬಿತ್ತರಿಸಬೇಕು."

ಹಝ್ರತ್ ಖಲೀಫತುಲ್ ಮಸೀಹ್ ರಬಿ(ರ) ಹೇಳುತ್ತಾರೆ:

ಇಂಗ್ಲೀಷ್‌ನಲ್ಲಿ ಒಂದು ಮಾತಿದೆ. "Cat is out of the Bag," ಎಂದು ಕರೆಯುತ್ತಾರೆ, ಬೆಕ್ಕು ಚೀಲದಿಂದ ಹೊರಬಂದಿತು. ಹಾಗಾಗಿ ಇದು ಅವರ ಸ್ಥಿತಿಯಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಅಹ್ಮದಿಯಾ ಜಮಾಅತ್ ಅನ್ನು ಸುಳ್ಳು ಮತ್ತು ಮೋಸದಿಂದ ಅವರು ಹೇಗೆ ಆಕ್ರಮಣ ಮಾಡುತ್ತಾರೆ, ಆದರೆ ಅವರ ಆಂತರಿಕ ಆತ್ಮವನ್ನು ಮರೆಮಾಡುತ್ತಾರೆ, ಅದನ್ನು ಅವರೇ ಒಪ್ಪಿಕೊಂಡಿದ್ದಾರೆ ಮತ್ತು ಅವರ ಗುರಿಗಳನ್ನು ಹೇಳಿದರು? ಅಡಿಪಾಯ ಹಾಕಿದವರು ಯಾರು? ಈ ಎಲ್ಲಾ ಪುರಾವೆಗಳು ಐತಿಹಾಸಿಕವಾಗಿ ಅಸ್ತಿತ್ವದಲ್ಲಿವೆ, ಯಾವುದೇ ಅಹ್ಮದಿಯ ಅದರಲ್ಲಿ ಯಾವುದೇ ಹಸ್ತಾಕ್ಷೇಪವಿಲ್ಲ ಮತ್ತು ಯಾವುದೇ ಅಭಿಪ್ರಾಯವನ್ನು ರೂಪಿಸುವ ಅಗತ್ಯವಿಲ್ಲ. ನಜದೀಯ್ಯತ್ ಎಂದು ಕರೆಯಲ್ಪಡುವ ಚಳವಳಿಯನ್ನು ಬ್ರಿಟಿಷರು ನಿರಂತರವಾಗಿ ಬೆಂಬಲಿಸಿದ್ದಾರೆ ಮತ್ತು ಅವರ ಒಪ್ಪಂದಗಳನ್ನು ಇತಿಹಾಸ ಪುಸ್ತಕಗಳಲ್ಲಿ ಮುದ್ರಿಸಲಾಗಿದೆ, ಅದರ ಮೂಲ ಗ್ರಂಥಗಳು ಇಲ್ಲಿ ಲಂಡನ್ ಗ್ರಂಥಾಲಯಗಳಲ್ಲಿ ಲಭ್ಯವಿದೆ ಮತ್ತು ನೀವು ಅವುಗಳನ್ನು ಇಲ್ಲಿ ನೋಡಬಹುದು. ಬ್ರಿಟಿಷರು ಪ್ರಾಮಾಣಿಕವಾಗಿ ಒಪ್ಪಂದ ಮಾಡಿಕೊಂಡು ಅಹ್ಲೆ ಹದೀಸ್ ಚಳುವಳಿಯನ್ನು ಎಂದರೆ ವಹಾಬಿ ಪಂಥವನ್ನು ಪ್ರಸಕ್ತ ಸವೂದಿ ಸರಕಾರದ ಸಂಸ್ಥಾಪಕರೊಡನೆ ಪರಸ್ಪರ ಒಮದು ಸಂಬಂಧ ಸ್ಥಾಪಿಸಿದರು ಮತ್ತು ಜಿಹಾದಿನ ಒಂದು ಚಳುವಳಿ ನಡೆಸಿದ್ದರು. ಬ್ರಿಟಿಷರ ವಿರುದ್ಧವಲ್ಲ. ಅವರಂತು ಅವರ ಮುಖಂಡರಾಗಿದ್ದರು. ಅವರಿಗೆ ವಾರ್ಷಿಕ ರೂ. 5,000/- ಪೌಂಡ್ ಸಹಾಯ ನೀಡುತ್ತಿದ್ದರು ಎಂದರೆ ಜಿಹಾದಿನ ಚಳುವಳಿ ಯಾರ ವಿರುದ್ಧ ನಡೆಸಿದ್ದರು? ಅದು ತುರ್ಕಿಯ ಮುಸಲ್ಮಾನರ ವಿರುದ್ಧವಾಗಿತ್ತು. (ಖುತ್ಬಾತ್ ತಾಹಿರ್, ಸಂಪುಟ-4 ಖುತ್ಬಾ ಜುಮುಅ 1ನೇ ಫೆಬ್ರವರಿ 1985, ಉಲ್ಲೇಖಗಳ ಮೇಲಿನ ವ್ಯಾಖ್ಯಾನವು ಹುಝೂರ್ ರಹಮತುಲ್ಲಾ ಅವರದು)

ನಾವು ಅಹ್ಮದಿಯೇತರ ಉಲಮಾಅಗಳು ಯಾವ ರೀತಿ ಬ್ರಿಟಿಷ್ ಸರಕಾರವನ್ನು ಹೊಗಳುತ್ತಿದ್ದರು, ಅವರ ಪ್ರಶಂಸೆಯಲ್ಲಿ ಕವನಗಳನ್ನು ಬರೆಯುತ್ತಿದ್ದರು. ಮತ್ತು ಅವರಿಂದ ಪ್ರಯೋಜನವನ್ನು ಪಡೆಯುತ್ತಿದ್ದರು ಎಂಬುದಕ್ಕೆ ಹಲವು ಪುರಾವೆಗಳನ್ನು ಒದಗಿಸಿದ್ದೇವೆ. ಆದರೆ ಹಝುರತ್ ಮಸೀಹ್ ಮೌಊದ್ (ಅ) ರವರಂತೂ ಏನೆಲ್ಲ ಹೇಳಿದ್ದಾರೆ. ಅದು ಸತ್ಯವನ್ನೇ ಹೇಳಿದ್ದಾರೆ ಮತ್ತು ಅವರಿಂದ ಎಂದರೆ ಬ್ರಿಟಿಷ್ ಸರಕಾರದಿಮದ ಯಾವ ಪ್ರಯೋಜನವೂ ಪಡೆದಿಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಬ್ರಿಟಿಷರೊಂದಿಗೆ ಸೇರಿ ಮುಸಲ್ಮಾನರ ವಿರುದ್ಧ ಸಂಚು ಹೂಡುತ್ತಿದ್ದರೆ ಸಾಬೀತುಪಡಿಸಬೇಕು. ಅವರಿಂದ ಏನು ಪ್ರಯೋಜನ ಪಡೆದಿದ್ದೇವೆ ಎಂದು. ಸುಳ್ಳುಗಾರರ ಕೆಲಸ ಪುರಾವೆ ಒದಗಿಸುವುದು ಇರುವುದಿಲ್ಲ. ಕೇವಲ ಬೂಟಾಟಿಕೆ ಮಾತ್ರವಿರುತ್ತದೆ. "ಮುನ್ಸಿಫ್" ಪತ್ರಿಕೆಯ ಸಂಪಾದಕರು ಕೇವಲ ಬೂಟಾಟಿಕೆಯಿಂದ ಕೆಲಸ ನಿರ್ವಹಿಸಿದ್ದಾರೆ. ಅಲ್ಲಾಹನು ಅವರಿಗೆ ಸದ್ಬುದ್ಧಿಯನ್ನು ದಯಪಾಲಿಸಲಿ. ಮುಂದಿನ ಸಂಚಿಕೆಯಲ್ಲಿ ನಾವು "ಹಝುರತ್ ಮಸೀಹ್ ಮೌಊದ್(ಅ) ಬ್ರಿಟಿಷರೊಂದಿಗೆ ಜಿಹಾದ್ ನಿರಾಕರಿಸುತ್ತಿದ್ದರು ಎಂಬುದಕ್ಕೆ ಉತ್ತರ ನೀಡುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

...*...*...*...

**ಆಡಂಬರ ಮತ್ತು ತೋರ್ಪಡಿಕೆಗೋಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.**

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಅಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ-3, ಪುಟ-284) (ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

**Love for All, Hatred for None**

**ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು**

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 27, 28 ಮತ್ತು 29ನೇ ಅಕ್ಟೋಬರ್ 2023 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

ನೀವು ಪ್ರಾಮಾಣಿಕತೆಯಿಂದ ನಿಮ್ಮ ದೇಶಕ್ಕೆ ಸೇವೆ ಸಲ್ಲಿಸಬೇಕು ಮತ್ತು ಸಾಧ್ಯವಾದಷ್ಟು ಪರಿಪೂರ್ಣ ನಿಷ್ಠೆಯನ್ನು ಸಲ್ಲಿಸಬೇಕು
ನಿಮ್ಮ ಧಾರ್ಮಿಕ ಜ್ಞಾನ ಮತ್ತು ನಿಮ್ಮ ನಂಬಿಕೆಗಳ ತಿಳುವಳಿಕೆಯನ್ನು ಹೆಚ್ಚಿಸಲು ನಿಮ್ಮ ಎಲ್ಲಾ ಪ್ರತಿಭೆ ಮತ್ತು ಸಾಮರ್ಥ್ಯಗಳನ್ನು ಬಳಸಿಕೊಂಡು ನಿಮ್ಮ ಆಧ್ಯಾತ್ಮಿಕ ಸ್ಥಿತಿಯನ್ನು ನೀವು ನಿರಂತರವಾಗಿ ಸುಧಾರಿಸಬೇಕು.
ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರು ತಮ್ಮ ಜಮಾಅತ್ತಿನ ಸದಸ್ಯರಿಂದ ನಿರೀಕ್ಷಿಸುವ ಮಟ್ಟಿಗೆ ಅವರ ಕಾರ್ಯಗಳನ್ನು ಮತ್ತು ನಡವಳಿಕೆಗಳನ್ನು ಸುಧಾರಿಸಬೇಕು.

## ಅಹ್ಮದಿಯಾ ಮುಸ್ಲಿಮ್ ಜಮಾಅತ್ ಘಾನಾದ 2023 ರ 90 ನೇ ಜಲ್ಸ ಸಾಲಾನದ ಸಂದರ್ಭದಲ್ಲಿ ಸಯ್ಯಿದುನಾ ಹಝ್ರತ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್ ಅಯ್ಯದಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್ ಅವರ ವಿಶ್ವಾಸವರ್ಧಕ ವಿಶೇಷ ಸಂದೇಶ

2023 ರ ಜನವರಿ 20, 21 ಮತ್ತು 22 ರಂದು ಅಹ್ಮದಿಯಾ ಜಮಾಅತ್ ಘಾನಾ ತನ್ನ 90 ನೇ ವಾರ್ಷಿಕ ಜಲ್ಸಾವನ್ನು ಆಯೋಜಿಸುತ್ತಿರುವುದಕ್ಕೆ ನನಗೆ ತುಂಬಾ ಸಂತೋಷವಾಗಿದೆ. ಅಲ್ಲಾಹನು ನಿಮ್ಮ ಜಲ್ಸಾವನ್ನು ಮತ್ತು ಈ ಅನನ್ಯ ಮತ್ತು ವಿಶೇಷ ಉದ್ದೇಶಕ್ಕಾಗಿ ಒಟ್ಟುಗೂಡಿದ ಎಲ್ಲರಿಗೂ ಉತ್ತಮ ಯಶಸ್ಸನ್ನು ನೀಡಲಿ, ನೀವು ಒಳ್ಳೆಯತನ ಮತ್ತು ಧರ್ಮನಿಷ್ಠೆಯಲ್ಲಿ ಅಭಿವೃದ್ಧಿ ಸಾಧಿಸಲಿ.

ಘಾನಾ ಜಮಾಅತ್ ತನ್ನ ಪ್ರಾರಂಭದ ದೃಷ್ಟಿಯಿಂದ ಈಗಾಗಲೇ ಹೊಸ ಶತಮಾನವನ್ನು ಪ್ರವೇಶಿಸಿದೆ ಮತ್ತು ಈಗ ಅದರ 100 ನೇ ವಾರ್ಷಿಕೋತ್ಸವದ ನಂತರ ಮತ್ತೊಂದು ವರ್ಷ ಕಳೆದಿದೆ. ಆದ್ದರಿಂದ, ಈ ಆಧುನಿಕ ಯುಗದಲ್ಲಿ, ನಿಮ್ಮ ಕಾರ್ಯಕ್ಷಮತೆಯನ್ನು ನೀವು ಮರು ಮೌಲ್ಯಮಾಪನ ಮಾಡುವುದು ಅನಿವಾರ್ಯವಾಗಿದೆ. ಮೊದಲಿಗಿಂತ ಅಧಿಕವಾಗಿ ಶ್ರಮವಹಿಸಬೇಕು ಮತ್ತು ತಮ್ಮ ಬೈಅತ್ತಿನ ಶರತ್ತುಗಳನ್ನು ಪೂರೈಸಲು ಪ್ರಯತ್ನಿಸಿ. ನೀವು ಹೊಸ ಉತ್ಸಾಹ, ಶಕ್ತಿ ಮತ್ತು ಸಮರ್ಪಣಾ ಮನೋಭಾವದಿಂದ ಜಮಾಅತ್‌ನ ಸೇವೆಗೆ ನಿಮ್ಮನ್ನು ಅರ್ಪಿಸಿಕೊಳ್ಳಬೇಕು. ಘಾನಾದಲ್ಲಿ ಜಮಾಅತ್ ಸ್ಥಾಪನೆಯಾದಾಗಿನಿಂದ ಘಾನಾ ಜಮಾಅತ್ ಶತಮಾನದ ಮೈಲಿಗಲ್ಲು ದಾಟಿದೆ ಎಂದು ನೀವು ಸಂತೋಷಪಡಬಾರದು ಮತ್ತು ತೃಪ್ತಿಪಡಬಾರದು. ಬದಲಿಗೆ ಕಳೆದ ಶತಮಾನಕ್ಕಿಂತಲೂ ಹೆಚ್ಚು ಅವಧಿಯಲ್ಲಿ ಏನು ಮಾಡಲಾಗಿದೆ ಎಂಬುದರ ಬಗ್ಗೆ ಪ್ರಾಮಾಣಿಕವಾಗಿ ಅವಲೋಕಿಸಬೇಕು. ನಾವು ಏನನ್ನು ಸಾಧಿಸಿದ್ದೇವೆ ಮತ್ತು ನಾವು ಹೇಗೆ ಹೆಚ್ಚು ವೇಗದಿಂದ ಮುನ್ನಡೆಯಬಹುದು ಮತ್ತು ಯಶಸ್ಸನ್ನು ಸಾಧಿಸಬಹುದು ಮತ್ತು ನಮ್ಮ ದೌರ್ಬಲ್ಯಗಳನ್ನು ಹೇಗೆ ಜಯಿಸಬಹುದು ಎಂದು ನೀವೇ ಸ್ವತಃ ಕೇಳಿಕೊಳ್ಳಬೇಕು. ತಮ್ಮ ಕಾರ್ಯಕ್ಷಮತೆಯನ್ನು ನಿರಂತರವಾಗಿ ಸುಧಾರಿಸುವ ಸಮುದಾಯಗಳು ಮಾತ್ರ ಯಶಸ್ವಿಯಾಗುತ್ತವೆ. ಆದ್ದರಿಂದ ನೀವು ಜಮಾಅತ್‌ನ ಅಭಿವೃದ್ಧಿಗೆ ಬುದ್ಧಿವಂತ ಮತ್ತು ಪರಿಣಾಮಕಾರಿ ಯೋಜನೆಗಳನ್ನು ಮಾಡಬೇಕು, ಮುಂಬರುವ ವರ್ಷಗಳಲ್ಲಿ ನಿಮ್ಮ ಯಶಸ್ಸು ಹಲವಾರು ಪಟ್ಟು ಹೆಚ್ಚಾಗಬೇಕು.

ಜಲ್ಸದಲ್ಲಿ ಒಟ್ಟಿಗೆ ಸೇರುವ ಮೂಲ ಉದ್ದೇಶವು ಆಧ್ಯಾತ್ಮಿಕ ವಾತಾವರಣದಲ್ಲಿ ಪಾಲ್ಗೊಳ್ಳುವುದು ಮತ್ತು ನಮ್ಮ ಸೃಷ್ಟಿಕರ್ತನಾದ ಸರ್ವಶಕ್ತನಾದ ಅಲ್ಲಾಹನ ಹಕ್ಕುಗಳನ್ನು ಪೂರೈಸುವ ಮತ್ತು ಅವನ ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸಲು ಕಾಳಜಿ ವಹಿಸುವ ಮಾರ್ಗವನ್ನು ಮುನ್ನಡೆಸುವುದಾಗಿದೆ ಎಂದು ನಾನು ನಿಮಗೆ ನೆನಪಿಸುತ್ತೇನೆ. ಸರ್ವಶಕ್ತನಾದ ಅಲ್ಲಾಹನೊಂದಿಗೆ ವೈಯಕ್ತಿಕ ಸಂಬಂಧವನ್ನು ರಚಿಸಿ ಮತ್ತು ಎಲ್ಲಾ ಸಮಯದಲ್ಲೂ, ಎಲ್ಲಾ ಸಂದರ್ಭಗಳಲ್ಲಿಯೂ ಅವನನ್ನು ನೆನಪಿಸಿಕೊಳ್ಳಿ.

ನಮ್ಮ ಪ್ರೀತಿಯ ಪ್ರವಾದಿ ಹಝ್ರತ್ ಪೈಗಂಬರ್ (ಸ)ರವರು ಬೋಧಿಸಿದರು: ಅಲ್ಲಾಹನನ್ನು ನಿಮ್ಮ ಮನಸ್ಸಿನಲ್ಲಿ ಇರಿಸಿ ಮತ್ತು ನೀವು ಅಲ್ಲಾಹನನ್ನು ನಿಮ್ಮ ಮುಂದೆ ಕಾಣುವಿರಿ, ನಿಮ್ಮ ಸೌಲಭ್ಯದ ಸಮಯದಲ್ಲಿ ಅಲ್ಲಾಹನನ್ನು ಸ್ಮರಿಸಿ ಮತ್ತು ಕಷ್ಟದ ಸಮಯದಲ್ಲಿ ಅವನು ನಿಮ್ಮನ್ನು ನೆನಪಿಸಿಕೊಳ್ಳುತ್ತಾನೆ. ನಿಮಗೆ ಕಳೆದುಹೋದದ್ದು ನಿಮಗಾಗಿ ಅಲ್ಲ ಎಂದು ನೆನಪಿಡಿ. ಮತ್ತು ನಿಮಗಾಗಿ ಏನನ್ನು ಉದ್ದೇಶಿಸಲಾಗಿದೆಯೋ ಅದು ಯಾವಾಗಲೂ ನಿಮ್ಮನ್ನು ತಲುಪುತ್ತದೆ. ಅಲ್ಲಾಹನ ಸಹಾಯವು ಸ್ಥಿರತೆಯ ಪರಿಣಾಮವಾಗಿ ಬರುತ್ತದೆ ಎಂಬುದನ್ನು ನೆನಪಿಡಿ. ಮತ್ತು ಸುಲಭ ಮತ್ತು ಕಷ್ಟದ ಸಮಯಗಳು ಮಿಶ್ರಣವಾಗಿದೆ ಮತ್ತು ಪ್ರತಿ ಕಷ್ಟದ ನಂತರ ಸುಲಭದ ಸಮಯ ಬರುತ್ತದೆ. (ರಿಯಾಝುಸ್ಸಾಲಿಹೀನ್, ಇಮಾಮ್ ಅಲ್-ನವಾವಿ, ಹದೀಸ್-62)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಮ್ಮ ಜೀವನದ ನಿಜವಾದ ಉದ್ದೇಶವು ನಮ್ಮ ಸೃಷ್ಟಿಕರ್ತನಿಗೆ ನಮ್ಮ ಹೃದಯದ ಕಿಟಕಿಯನ್ನು ತೆರೆಯುವುದಾಗಿದೆ. ಅವರು(ಅ) ಹೇಳುತ್ತಾರೆ: "ಓ ಜನರೇ, ನಿಮ್ಮ ನಿಜವಾದ ದೇವರನ್ನು, ನಿಮ್ಮ ನಿಜವಾದ ಸೃಷ್ಟಿಕರ್ತನನ್ನು, ನಿಮ್ಮ ನಿಜವಾದ ದೇವರನ್ನು ಗುರುತಿಸಲು, ಪ್ರೀತಿಸಲು ಮತ್ತು ಪಾಲಿಸಲು ನಿಮ್ಮನ್ನು ಸೃಷ್ಟಿಸಲಾಗಿದೆ." (ಫಾತಹ್ ಇಸ್ಲಾಂ, ರುಹಾನಿ ಖಝಾಇನ್, ಸಂಪುಟ-3, ಪುಟ-43)

ನಮ್ಮ ಸಹಜೀವಿಗಳ ಕಡೆಗೆ ನಮ್ಮ ಕರ್ತವ್ಯಗಳ ಕುರಿತು, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ದೇವನ ದಾಸರ ಮೇಲೆ ದಯೆ ದೋರಿರಿ. ಅವರ ಮೇಲೆ ನಾಲಗೆ, ಕೈ ಅಥವಾ ಬೇರೆ ಯಾವುದಾದರೂ ರೀತಿಯಲ್ಲಿ ದೌರ್ಜನ್ಯ ಮಾಡಬೇಡಿರಿ. ನೀವು ದೇವ ಸೃಷ್ಟಿಗಳ ಒಳಿತಿಗಾಗಿ ಪ್ರಯತ್ನ ಮಾಡುತ್ತಾ ಇರಿ. ನೀವು ನಿಮ್ಮ ಅಧೀನಕೊಳಗಾಗಿರುವವರ ಮೇಲಾಗಲಿ ಇತರರ ಮೇಲಾಗಲಿ ಅಹಂಕಾರದಿಂದ ವರ್ತಿಸಬೇಡಿರಿ. ಯಾರನ್ನೂ ಬೈಯ ಬೇಡಿರಿ. ಅವರು ನಿಮ್ಮನ್ನು ಬಯ್ಯುತ್ತಿದ್ದರೂ ನೀವು ಬೈಯ್ಯ ಬೇಡಿರಿ. ನೀವು ವಿನಯ ಶಾಲಿಗಳೂ ಮೃದು ಸ್ವಭಾವ ಹೊಂದಿದವರೂ ಒಳ್ಳೆಯ ಸಂಕಲ್ಪ ಹೊಂದಿದವರೂ ದೇವ ಸೃಷ್ಟಿಗಳ ಹಿತೈಷಿಗಳೂ ಆಗಿರಿ. ನೀವು ಹೀಗೆ ಆಗುವುದಾದರೆ ದೇವನಿಂದ ನೀವು ಅಂಗೀಕರಿಸಲ್ಪಡುವಿರಿ." (ಕಿಶ್ತಿ ಎ ನೂಹ್, ರೂಹಾನಿ ಖಝಾಇನ್, ಸಂಪುಟ-19, ಪುಟಗಳು 11-12)

ಆದ್ದರಿಂದ, ನೀವು ನಿಜವಾದ ಆಧ್ಯಾತ್ಮಿಕ ಗುರಿಗಳನ್ನು ಸಾಧಿಸಲು ಮತ್ತು ತಈಖಇಜಣಟಂಜ ಅಲ್ಲಾಟ ಮತ್ತು ಅವನ ಜೀವಿಗಳ ಹಕ್ಕುಗಳನ್ನು ಪೂರೈಸುವ ಕಡೆಗೆ ನಿಮ್ಮ ಗಮನವನ್ನು ಕೇಂದ್ರೀಕರಿಸಬೇಕು. ಇದಲ್ಲದೆ, ಪ್ರತಿಯೊಬ್ಬ ಅಹ್ಮದಿಯು ತನ್ನ ದೇಶದ ನಿಷ್ಠಾವಂತ ಪ್ರಜೆಯಾಗಿರಬೇಕು ಮತ್ತು ಘಾನಾದ ಅಭಿವೃದ್ಧಿ ಮತ್ತು ಸಮೃದ್ಧಿಗೆ ಶ್ರದ್ಧೆಯಿಂದ ಕೊಡುಗೆ ನೀಡಬೇಕು. ನಿಮ್ಮ ಸಹವರ್ತಿ ಘಾನಿಯನ್ನರು ರಾಷ್ಟ್ರದ ಒಟ್ಟಾರೆ ಅಭಿವೃದ್ಧಿ ಮತ್ತು ಸುಧಾರಣೆಗಾಗಿ, ಪ್ರತಿಯೊಬ್ಬ ಜನರು ಒಗ್ಗಟ್ಟಿನಿಂದ ಪ್ರಯತ್ನಿಸುವುದು ಅತ್ಯಗತ್ಯ ಎಂದು ತಿಳಿಸಿ.

ಆದ್ದರಿಂದ, ನೀವು ನಿಮ್ಮ ದೇಶಕ್ಕೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಬೇಕು ಮತ್ತು ಸಾಧ್ಯವಾದಷ್ಟು ಸಂಪೂರ್ಣ ನಿಷ್ಠೆಯನ್ನು ನೀಡಬೇಕು. ನಿಮ್ಮ ಆಧ್ಯಾತ್ಮಿಕ ಸ್ಥಿತಿಯನ್ನು ನೀವು ನಿರಂತರವಾಗಿ ಸುಧಾರಿಸಬೇಕು. ನಿಮ್ಮ ಧಾರ್ಮಿಕ ಜ್ಞಾನ ಮತ್ತು ನಿಮ್ಮ ನಂಬಿಕೆಗಳ ತಿಳುವಳಿಕೆಯನ್ನು ಹೆಚ್ಚಿಸಲು ನಿಮ್ಮ ಎಲ್ಲಾ ಪ್ರತಿಭೆ ಮತ್ತು ಸಾಮರ್ಥ್ಯಗಳನ್ನು ನೀವು ಬಳಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ತಮ್ಮ ಜಮಾಅತ್ತಿನ ಸದಸ್ಯರನ್ನು ನಿರೀಕ್ಷಿಸುತ್ತಾರೆ. ಆದ್ದರಿಂದ, ನೀವು ಸ್ವಯಂ ಹೊಣೆಗಾರಿಕೆಯಿಂದ ಮತ್ತು ಉತ್ತಮ ಅಹ್ಮದಿಯಾಗಲು ಪ್ರಯತ್ನಿಸುವ ಮೂಲಕ ಮಾತ್ರ ಜಲ್ಸಕ್ಕೆ ಹಾಜರಾಗುವ ಗುರಿಯನ್ನು ಸಾಧಿಸಲು ಸಾಧ್ಯವಾಗುತ್ತದೆ.

ಕೊನೆಗೆ ಅಹ್ಮದಿಯಾ ಜಮಾಅತ್ ಘಾನಾಕ್ಕೆ ಅಲ್ಲಾಹನು ಅಗಾಧವಾದ ಅಭಿವೃದ್ಧಿಯನ್ನು ನೀಡಲಿ, ಅದು ಮೊದಲಿಗಿಂತ ದೊಡ್ಡದಾಗಿದೆ ಎಂದು ಸಾಬೀತುಪಡಿಸಲಿ ಎಂಬುದು ನನ್ನ ದುಆ ಆಗಿದೆ. ಅಲ್ಲಾಹನು ನಿಮಗೆ ಹೆಚ್ಚು ನೀತಿವಂತ ಮತ್ತು ಧಾರ್ಮಿಕ ಅಸ್ತಿತ್ವವನ್ನು ನೀಡಲಿ. ಅಲ್ಲಾಹನು ಅಹ್ಮದಿಯಾ ಜಮಾಅತ್ ಘಾನಾವನ್ನು ಮುನ್ನಡೆಸಲಿ ಮತ್ತು ಮುನ್ನಡೆಯುತ್ತಿರುವ ಜಮಾಅತ್‌ಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆಯಲಿ. ಈ ಮಹತ್ತರವಾದ ಗುರಿಯನ್ನು ಸಾಧಿಸುವ ಅವಕಾಶವನ್ನು ಅಲ್ಲಾಹನು ನಿಮಗೆ ನೀಡಲಿ. ಅಮೀನ್

(ಅಖ್ಬರ್ ಅಲ್-ಫಜಲ್ ಇಂಟರ್ನ್ಯಾಷನಲ್ ಕೃಪೆ ಮೇ 3, 2023)

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅವನ್ನು** ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ

**MUSLIM TELEVISION AHMADIYYA INTERNATIONAL**
**www.mta.tv**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ªÀË H zï (ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಅನುಯಾಯಿಗಳು ಅಲ್ಲಾಹನಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾರೆ. ನಾವು ಫತಹ ಅಝೀಮ್ ಮಸೀದಿಯನ್ನು ನಿಜವಾದ ಧಾರ್ಮಿಕ ಸ್ವಾತಂತ್ರ್ಯದ ರೂಪದಲ್ಲಿ ಅದರ ಉದ್ಘಾಟನೆ ಮಾಡುತ್ತಿದ್ದೇವು. ಇದರ ಬಾಗಿಲುಗಳು ಈ ಸರ್ವರ ಸಂದೇಶದೊಂದಿಗೆ ತೆರೆಲಾಗುತ್ತಿದೆ. ಎಲ್ಲಾ ಜನರ ಮತ್ತು ಸಮುದಾಯಗಳ ಧಾರ್ಮಿಕ ಹಕ್ಕುಗಳ ಮತ್ತು ಶಾಂತಿಯುತ ವಿಶ್ವಾಸಗಳ ಬಗ್ಗೆ ಸದಾ ಗಮನಹರಿಸಲಾಗುವುದು ಮತ್ತು ಅದನ್ನು ರಕ್ಷಿಸಲಾಗುವುದು. ಇದು ಅಹ್ಮದಿಯಾ ಜಮಾಅತಿನ ಪ್ರಥಮ ಕರ್ತವ್ಯವಾಗಿದೆ. ಮಾನವ ಕುಲವನ್ನು ಮುಕ್ತಿಯ ಮಾರ್ಗದ ಮೇಲೆ ನಡೆಸಬೇಕು ಮತ್ತು ಎಲ್ಲ ಜನರ ವರ್ಣ ಭೇಧವಿಲ್ಲದೇ ಪರಸ್ಪರ ಪ್ರೀತಿ ಮತ್ತು ಸಹೋದರತೆ ದೃಢಪಡಿಸುವಂತಾಗಬೇಕು. ನಿಜ ಅರ್ಥದಲ್ಲಿ ನಿಜವದ ಶಾಂತಿ ಮತ್ತು ಸುರಕ್ಷತೆ ಒದಗಿಸಬೇಕು.

ಹುಝುರೆ ಅನ್ವರ್(ಅಬಿಅ) ನುಡಿದರು. ನನ್ನ ಹಾರ್ಧಿಕ ಮನೋಕಾಮನೆಯಾಗಿದೆ ಮತ್ತು ಪ್ರಾರ್ಥನೆಯಾಗಿದೆ ಈ ಮಸೀದಿ ಇನ್‌ಶಾಅಲ್ಲಾಹ್ ಶಾಂತಿ, ಸಹನೆ ಮತ್ತು ಎಲ್ಲಾ ಮಾನವ ಕುಲಕ್ಕೆ ಪ್ರೀತಿಯ ಸ್ತೋತ್ರವಾಗುವುದು ನನ್ನ ಪ್ರಾರ್ಥನೆಯಿದೆ. ಇಲ್ಲಿ ಆರಾಧಿಸುವವರೆಲ್ಲರೂ ಪೂರ್ಣ ವಿನಯದೊಂದಿಗೆ ತನ್ನ ಸೃಷ್ಟಿಕರ್ತರನ್ನು ಅರುಹಬೇಕು. ಅವನ ಮುಂದೆಯೇ ತಲೆಬಾಗಬೇಕು ಮತ್ತು ಮಾನವ ಹಕ್ಕುಗಳನ್ನು ಪಾಲಿಸಬೇಕು. ನನಗೆ ಪೂರ್ಣ ವಿಶ್ವಾಸವಿದೆ. ನಾವು ಅಲ್ಲಾಹನ ಆರಾಧೆಯ ಹಕ್ಕುಗಳನ್ನು ಮತ್ತು ಮಾನವ ಕುಲದ ಹಕ್ಕುಗಳನ್ನು ಪಾಲಿಸುವವರಾದರೆ ಮಾತ್ರ ನಾವು ಯಶಸ್ಸು ಕಾಣಬಹುದಾಗಿದೆ. ಇದೇ ಪದಗಳೊಂದಿಗೆ, ನಿಮ್ಮೆಲ್ಲರಿಗೂ ಮತ್ತೊಮ್ಮೆ ಈ ಸಂಜೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೀರಿ, ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಅಲ್ಲಾಹನು ನಿಮ್ಮೆಲ್ಲರನ್ನು ಅನುಗ್ರಹಿಸಲಿ. ಆಮೀನ್.

**(ಮುಂದುವರಿಯುವುದು)**

"ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು ಆದರೆ ಹೃದಯಗಳನ್ನಲ್ಲ ಬಲದಿಂದ ಶಿರಗಳನ್ನು ಬಾಗಿಸಬಹುದು ಆದರೆ ಮನಸ್ಸುಗಳನ್ನಲ್ಲ"
(ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ(ರ))

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಹಿಂದೆ ಸರಿಯಿರಿ.

ಅನುಮಾನ ಪಡುವ ಸಂಭವಗಳಲ್ಲಿ ಕಿವಿಯು ಪ್ರಥಮ ಸ್ಥಾನ ಹೊಂದಿದೆ. ಹೆಚ್ಚಿನ ಜನರು ಜನರ ಮಾತುಗಳನ್ನು ಕೇಳಿ ಅನುಮಾನಕ್ಕೆ ಒಳಗಾಗುತ್ತಾರೆ. ಆದ್ದರಿಂದ ಮೊದಲು ಅದರ ಬಗ್ಗೆಯೇ ವಿವರಿಸಲಾಗಿದೆ. ಅದಾದ ನಂತರ ಇನ್ನೊಂದು ಕಾರಣ 'ಕಣ್ಣು' ಆಗಿದೆ. ಅದನ್ನು ಎರಡನೆಯ ಸ್ಥಾನದಲ್ಲಿ ಇಡಲಾಗಿದೆ. ಅದಾದ ನಂತರ ಅನುಮಾನಕ್ಕೆ ಒಳಗಾಗುವ ಆ ವ್ಯಕ್ತಿಯಾಗಿದ್ದಾನೆ. ಅವನು ದೂರು ಕೇಳಿರುವುದಿಲ್ಲ. ಶಂಕಿತ ದೃಶ್ಯವು ನೋಡಿರುವುದಿಲ್ಲ. ಆದರೆ ತಂತಾನೆ ಒಂದು ಕಾರಣ ಹುಡುಕಿಕೊಂಡು ಇನ್ನೊಬ್ಬರ ಹಿಂದೆ ಬಿದ್ದಿರುತ್ತಾನೆ. ಇದನ್ನು ಎಲ್ಲದ್ದಕ್ಕಿಂತ ಕೊನೆಯಲ್ಲಿ ಇಡಲಾಗಿದೆ. ಇದಕ್ಕೆ ಕಾರಣಕರ್ತರಾಗುವ ಜನರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಏಕೆಂದರೆ ಅಪಾಯಕರ ರೋಗಿಗಳು, ಸಾಮಾನ್ಯ ರೋಗಿಗಳಿಗಿಂತ ಕಡಿಮೆ ಸಂಖ್ಯೆಯಲ್ಲಿರುತ್ತಾರೆ.

**ಇನ್ನಸ್ಸಮ್‌ಅ** ಈ ವಾಕ್ಯದ ಮೂಲಕ ಸಂಕೇತಿಸಲಾಗಿದೇನೆಂದರೆ, ಕೇವಲ ಜೀವಿತ ಹಾಗೂ ಸಂಪತ್ತುಗಳ ವಿಷಯಗಳಲ್ಲಿ ಶಿಕ್ಷಿಸಲಾಗುವುದು ಎಂದು ಭಾವಿಸಬೇಡಿರಿ. ಬದಲು ಮನುಷ್ಯ ಮಾನದ ಮೇಲೆ ದಾಳಿ ಇಡುವುದರಿಂದ ಬಗ್ಗೆ ಸಹ ಪ್ರಶ್ನಿಸಲಾಗುವುದು ಕೇಳುವ ಹಕ್ಕಿಲ್ಲದ ಇನ್ನೊಬ್ಬರ ಪೈಕಿಯ ಮಾತು ಕೇಳಿದರೆ ಅದನ್ನು ಕೂಡ ಪ್ರಶ್ನಿಸಲಾಗುತ್ತದೆ. ತನಗೆ ಹಕ್ಕಿಲ್ಲದ ಇನ್ನೊಬ್ಬರ ನೋಟ ನೋಡಿದರೆ ಅದನ್ನು ಕೂಡ ಪ್ರಶ್ನಿಸಲಾಗುತ್ತದೆ. ತನಗೆ ಹಕ್ಕಿಲ್ಲದ ಆಲೋಚನೆಗಳು ಮನದಲ್ಲಿಟ್ಟುಕೊಂಡರೆ ಅದನ್ನು ಕೂಡ ಪ್ರಶ್ನಿಸಲಾಗುತ್ತದೆ. ಇದು ಎಂತಹ ಉನ್ನತಮಟ್ಟದ ಪವಿತ್ರ ಶಿಕ್ಷಣವಾಗಿದೆ. ಅದರಂತೆ ನಡೆದುಕೊಂಡರೆ ಯಾವುದೇ ರೀತಿಯ ಅಶುದ್ಧತೆ ಬಾಕಿ ಇರಲು ಸಾಧ್ಯವಿಲ್ಲ.

ಇದರಲ್ಲಿ ನೈತಿಕತೆಯ ಬಗ್ಗೆ ಅತ್ಯಂತ ಉಚ್ಚ ಶಿಕ್ಷಣ ನೀಡಲಾಗಿದೆ. ಮನುಷ್ಯ ಬರಿ ಅನುಮಾನಗಳ ಮೇಲೆ ತನ್ನ ನಿರ್ಣಯಗಳ ಬುನಾದಿ ಇರಕೂಡದು. ಬದಲು ಜ್ಞಾನದ ಮೇಲೆ ಇಡಬೇಕಾಗಿದೆ. ಕೇವಲ ಕಿವಿ ಕೇಳಿದ್ದು ಅಥವಾ ಕಣ್ಣು ನೋಡಿದ್ದು ಅಥವಾ ಹೃದಯದ ಭಾವನೆಗಳ ಸಾಕ್ಷಿ ಸಾಕಾಗುವುದಿಲ್ಲ. ಬದಲು ಎಲ್ಲ ಮೂಲಗಳಿಂದ ಕೂಲಂಕುಷವಾಗಿ ತಿಳಿದು ನಿರ್ಣಯ ಕೈಗೊಳ್ಳಬೇಕು. ಹಝ್ರತ್ ಇಮಾಮ್ ಅಬೂ ಹನೀಫ (ಕದ) ರವರ ಒಂದು ಸುಪ್ರಸಿದ್ಧ ನುಡಿಯಿದೆ. ಒಟ್ಟಿನಲ್ಲಿ 99 ಶತಮಾನ ಅವಿಶ್ವಾಸದ ಕಾರಣಗಳಿದ್ದರೂ, ಶೇಖಡ ಒಂದು ಕಾರಣ ವಿಶ್ವಾಸದ ಕುರಿತಾಗಿದ್ದರೆ ಅವನನ್ನು ಅವಿಶ್ವಾಸಿ ಎನ್ನಬೇಡಿರಿ." ಈ ಜ್ಞಾನಪೂರ್ಣ ಹೇಳಿಕೆಯ ಅರ್ಥ 99 ಶೇಕಡ ಕೆಲವು ಮೂಢರು ಭಾವಿಸಿದಂತೆ ಹೀಗಲ್ಲ, ಅವನು ಧರ್ಮಬದ್ಧ 99ಶೇಕಡ ಅವಿಶ್ವಾಸದ ಕಾರಣಗಳು ಹೊಂದಿದ್ದರೆ ಆಗಲೂ ಅವಿಶ್ವಾಸಿ ಎಂದು ಕರೆಯಬೇಡಿರಿ ಎಂದು. ಅವಿಶ್ವಾಸದ ಕಾರಣಗಳು ಕೇವಲ 7, 8 ಮಾತ್ರ ಆಗಿವೆ. ದೇವಾಸ್ತಿತ್ವ ನಿರಾಕರಿಸುವುದು, ಮಲಕುಗಳ (ದೇವರೂಪದ) ನಿರಾಕರಣೆ, ದೈವಿಕ ಗ್ರಂಥಗಳ ನಿರಾಕರಣೆ, ಪ್ರವಾದಿಗಳ ನಿರಾಕರಣೆ, ದುಆ (ಪ್ರಾರ್ಥನೆ)ಯ ನಿರಾಕರಣೆ, ವಿಧಿಯ ನಿರಾಕರಣೆ ಮತ್ತು ಮರಣದ ನಂತರದ ಲೋಕವನ್ನು ನಿರಾಕರಿಸುವುದು ಆದ್ದರಿಂದ ಅದರ ಅರ್ಥ 99% ಕಾರಣ ಅವಿಶ್ವಾಸದ್ದು ಹೊಂದಿದರೂ ಅವಿಶ್ವಾಸಿ ಎನ್ನಬೇಡಿರಿ ಎಂಬುದಾದರೆ ನಾಸ್ತಿಕನಿಗೂ ಕೌಫಿರ್ (ಅವಿಶ್ವಾಸಿ) ಎನ್ನಲಾಗದು. **(ತಫ್ಸೀರ್ ಕಬೀರ್, ಸಂಪುಟ–4, ಪುಟ–334, ಮುದ್ರಣ 2010 ಖಾದಿಯಾನ್)**

***128 ನೇ ಜಲ್ಸಾ ಸಾಲಾನ ಖಾದಿಯಾನ್ 29, 30, 31 ಡಿಸೆಂಬರ್ 2023ರಂದು ಆಯೋಜಿಸಲಾಗುವುದು***

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 128ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 29, 30 ಮತ್ತು 31ನೇ ಡಿಸೆಂಬರ್ 2023 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**
**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

"ವಾಗ್ದಾನವನ್ನು ನೆರವೇರಿಸುವುದು ಸತ್ಯವಿಶ್ವಾಸದ ಅಂಶವಾಗಿದೆ"
(ಹಝ್ರತ್ ಮುಹಮ್ಮದ್ ಪೈಗಂಬರ್(ಸ))

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 21 September 2023, Issue No. 38

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ-36ರ ಉಳಿದ ಭಾಗ ಮುಂದುವರಿಸಲಾಗಿದೆ)*

ಹುಝೂರೆ ಅನ್ವರ್(ಅಬಿಅ) ಹೇಳಿದರು. ನಿಮ್ಮಲ್ಲಿ ಕೆಲವರು ಪ್ರಶ್ನಿಸಬಹುದು. ಜಮಾಅತಿನ ಸ್ಥಾಪಕರು ಮಿಸ್ಟರ್ ಡೂಯಿಗೆ ಸಂಬೋಧಿಸಿ ಕಠಿಣವಾಗಿ ಏಕೆ ವರ್ತಿಸಿದರು. ಇದು ಅವರ ಪ್ರೀತಿಯ ಬೋಧನೆಗೆ ತಕ್ಕುದಾಗಿದೆಯೇ.

ನಿಜ ಹೇಳಬೇಕಾದರೆ ಹಝ್ರತ್ ಅಖ್‌ದಸ್ ಮಸೀಹ್ ಮೌಊದ್(ಅ) ರವರ ಶಾಂತಿಯುತ ಬೋಧನೆಗಳು, ಡೂಯಿ ಅವರಿಗೆ ನೀಡಿದ ಉತ್ತರದಲ್ಲಿ ಯಾವುದೇ ವಿರೋಧಭಾಸವಿಲ್ಲ. ಹಜ್‌ರತ್ ಮಸೀಹ್ ಮೌಊದ್(ಅ) ಯಾವ ಒಂದು ಸಂದರ್ಭದಲ್ಲೂ ಹಿಂಸೆ ಮತ್ತು ಉಗ್ರವಾದ ಅನುಸರಿಸುವ ಬೋಧನೆ ನೀಡಲಿಲ್ಲ. ವಾಸ್ತವವೇನೆಂದರೆ ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ಮಿಸ್ಟರ್. ಡೂಯಿಯ ಇಸ್ಲಾಮ್ ಮತ್ತು ಇಸ್ಲಾಮ್ ಧರ್ಮದ ಸ್ಥಪಕರ ವಿರುದ್ಧ ಅಪಶಬ್ಧಗಳ ಬಳಕೆ ಕೇಳಿಬಂದಾಗ ಅವರು ಗೌರವಪೂರ್ವಕವಾಗಿಯೇ ಸಾಕ್ಷ್ಯಗಳೊಂದಿಗೆ ಮನ್ನಿಸುವ ಪ್ರಯತ್ನ ಮಾಡಿದರು ಮತ್ತು ಅವರಿಂದಲು ಗೌರವ ಅಪೇಕ್ಷಿಸಿದರು. ಮುಸಲ್ಮಾನರ ಭಾವನೆಗಳನ್ನು ಆದರಿಸುವ ಅಪೇಕ್ಷೆ ಹೊಂದಿದರು. ಆದರೆ ಮಿಸ್ಟರ್ ಡೂಯಿ ಅದನ್ನು ಲೆಕ್ಕಿಸದೇ ಇಸ್ಲಾಮಿನ ವಿರುದ್ಧ ನಿಂತರು ಮತ್ತು ಘೋರ ವಿರೊಧ ವ್ಯಕ್ತಪಡಿಸಿದರು. ಉದಾಹರಣೆಗೆ ಬರೆಯುತ್ತಾರೆ. ಅವನು ದೇವನಿಂದ ಪ್ರಾರ್ಥಿಸುತ್ತೇನೆ. ಇಸ್ಲಾಂ ನಶಿಸುವ ದಿನಗಳು ಬೇಗ ಬರುವಂತಾಗಲಿ. ಓ ಪ್ರಬು ಇಸ್ಲಾಮ್ ಧರ್ಮವನ್ನು ನಾಶಪಡಿಸು.

ಮತ್ತು ತನ್ನ ಬರವಣಿಗೆಯಲ್ಲಿ ಮಿಸ್ಟರ್ ಡೂಯಿ ತುಂಬಾ ಅಹಂಕಾರದ ರೀತಿಯಲ್ಲಿ ಕ್ರೈಸ್ತ ಮತ್ತು ಇಸ್ಲಾಂ ವಿರುದ್ಧ ಯುದ್ಧವನ್ನು ಸಾರಿದನು. ಅವನು ಬರೆದ. ಮುಸಲ್ಮಾನರು ಕ್ರೈಸ್ತ ಧರ್ಮ ಸ್ವೀಕಾರ ಮಾಡದಿದ್ದರೆ ಅವರು ನಾಶಹೊಂದುವರು.

ಹುಝೂರೆ ಅನ್ವರ್(ಅಬಿಅ) ಹೇಳಿದರು. ಈ ಅತ್ಯಂತ ಉಗ್ರ ಹೇಳಿಕೆಗಳು ಮತ್ತು ಅಪಶಬ್ಧಗಳ ಉತ್ತರವಾಗಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ಸಾವಿರಾರು ಅಲ್ಲ, ಲಕ್ಷಾಂತರ ಮುಗ್ಧ ಜನರನ್ನು ಆ ಸಂಕಷ್ಟದಿಂದ ಪಾರು ಮಾಡಲು ಉಪಾಯ ಮಾಡಿದರು ಅವರು ಬಯಸಿದರೆ ಕ್ರೈಸ್ತ ಮತ್ತು ಮುಸಲ್ಮಾನರ ಮಧ್ಯ ಯುದ್ಧ ಬಯಸುವ ಡೂಯಿಯ ಮಾತಿಗೆ ಒಪ್ಪಬಹುದಾಗಿತ್ತು. ಅದರ ಬದಲು ಅವರು ಮಿಸ್ಟರ್ ಡೂಯಿಗೆ ಮುಬಾಹಲದ ಆಹ್ವಾನ ನೀಡಿದರು. ಅವರು ಹೇಳಿದರು. ಮುಸಲ್ಮಾನರ ವಿನಾಶಬಯಸುವ ಬದಲು ಮಿಸ್ಟರ್ ಡೂಯಿ ಹೀಗೆ ಪ್ರಾರ್ಥಿಸಲಿ. ನಮಿಬ್ಬರಲ್ಲಿ ಯಾರು ಸುಳ್ಳುಗಾರನು ಅವನು ಎದುರಾಳಿಯ ಜೀವನದಲ್ಲಿ ಸಾಯುವಂತಾಗಲಿ. ಇದು ವಾಸ್ತವದಲ್ಲಿ ಒಂದು ಅನುಕಂಪದ ಕ್ರಿಯೆ ಮತ್ತು ಪರಿಸ್ಥಿತಿಯನ್ನು ಉತ್ತಮಪಡಿಸುವ ಮಾರ್ಗವಾಗಿತ್ತು. ಅದನ್ನು ಬಿಟ್ಟು ಮುಸಲ್ಮಾನರನ್ನು ಕ್ರೈಸ್ತರ ವಿರುದ್ಧ ಎತ್ತಿಕಟ್ಟುವ ಯುದ್ಧಕ್ಕೆ ಉತ್ತೇಜಿಸುವ ಕಾರ್ಯಕೈಗೊಂಡರು. ಹಝುರತ್ ಅಖದಸ್ ಮಸೀಹ್ ಮೌಊದ್(ಅ) ಮಿಸ್ಟರ್ ಡೂಯಿಗೆ ಪ್ರಾರ್ಥನೆಯ ಮೇಲೆ ಒತ್ತು ನೀಡಲು ಮತ್ತು ಈ ಸಮಸ್ಯೆ ದೇವನ ಸುಪರ್ಧಿಗೆ ಬಿಡಲು ಹೇಳಿದರು.

ಹುಝೂರೆ ಅನ್ವರ್(ಅಬಿಅ) ಹೇಳಿದರು. ಇದು ಸತ್ಯವನ್ನು ತಿಳಿಯಲು ಒಂದು ಉಚಿತ ಹಾಗೂ ಶಾಂತಿಯುತ ಮಾರ್ಗವಾಗಿತ್ತು. ಇದು ವೈರತ್ವ ಹಾಗು ಉತ್ತೇಜನೆಯ ಬದಲು ಸಹಿಷ್ಣುತೆಯ ಪರಿಪೂರ್ಣ ಉಪಾಯವಾಗಿತ್ತು ಎಂದರೆ ಸುಳ್ಳಾಗಲಿಕ್ಕಿಲ್ಲ. ಈ ಪಂಥಾಹ್ವಾನದ ನಂತರ ಮಿಸ್ಟರ್ ಡೂಯಿ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ಅವರ ವಿರುದ್ಧ ಅತ್ಯಂತ ಅಸಭ್ಯ ಮಾರ್ಗ ಅನುಸರಿಸಿದನು. ಹಾಗೆ ವರದಿ ಬಂತು. ಮಿಸ್ಟರ್ ಡೂಯಿ ಹೇಳಿದನು. ಭಾರತದಲ್ಲಿ ಓರ್ವ ಮುಹಮ್ಮದಿ ಮಸೀಹನಿದ್ದಾನೆ. ಅವನು ನನಗೆ ಪದೇ ಪದೇ ಪತ್ರಗಳನ್ನು ಬರೆಯುತ್ತಾನೆ. ಇಂತಹ ಸೊಳ್ಳೆಗಳ ನೊಣಗಳಿಗೆ ನಾನು ಉತ್ತರಿಸುವೆನು ಎಂದು ಭಾವಿಸಿದ್ದೀರಾ, ನಾನು ಅವನ ಮೇಲೆ ನನ್ನ ಕಾಲು ಇಟ್ಟರೆ ಅವನಿಗೆ ಅಳಿಸಿ ಹಾಕುವೆನು.

ಹುಝೂರೆ ಅನ್ವರ್ ನುಡಿದರು. ಹಝ್ರತ್ ಅಖದಸ್ ಮಸೀಹ್ ಮೌಊದ್ (ಅ) ಮತ್ತೆ ತನ್ನ ಪಂಥ್ವಾನ ಪುನರುಚ್ಚರಿಸಿದರು. ಅಮೇರಿಕಾ ಮತ್ತು ಇತರ ಪ್ರದೇಶಗಳಲ್ಲಿ ಅದರ ಪ್ರಚಾರ ಮಾಡಿದರು. ಪತ್ರಕರ್ತರ ನಿಯೋಗ, ಮಿಸ್ಟರ್ ಡೂಯಿಯ ಶಕ್ತಿ ಮತ್ತು ಉನ್ನತ ಸ್ಥಾನ ಕುರಿತು ವಿವರಿಸುತ್ತಿದ್ದರು ಮತ್ತು ಅದರ ತುಲನೆ ಹಝ್ರತ್ ಅಖದಸ್ ಮಸೀಹ್ ಮೌಊದ್ (ಅ) ರೊಂದಿಗೆ ಹೀಗೆ ಮಾಡುತ್ತಿದ್ದರು. ಭಾರತದ ಒಂದು ದೂರದ ಸಣ್ಣ ಊರಿಗೆ ಸಂಬಂಧಿಸಿದ ಓರ್ವ ವ್ಯಕ್ತಿ, ಅವನ ಸಂಪತ್ತು ಮತ್ತು ಲೌಕಿಕ ಸ್ಥಾನಮಾನ ಯಾವ ಲೆಕ್ಕಕ್ಕೂ ಇಲ್ಲ, ದೈಹಿಕವಾಗಿಯೂ ಮಿಸ್ಟರ್ ಡೂಯಿ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ರವರಿಗಿಂತ ವಯಸ್ಸಿನಲ್ಲಿ ಸಣ್ಣವನು ಮತ್ತು ಆರೋಗ್ಯದಲ್ಲಿ ಉತ್ತಮವಾಗಿದ್ದನು. ಇವೆಲ್ಲ ಬಾಹ್ಯ ವ್ಯತ್ಯಾಸಗಳ ಹೊರತಾಗಿಯೂ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ಅಹ್ಮದಿಯಾ ಜಮಾಅತಿನ ಸ್ಥಾಪಕರು ಎಂದೂ ತನ್ನ ಪಂಥಾಹ್ವಾನ ಹಿಂಪಡೆಯಲು ಯೋಚಿಸಲಿಲ್ಲ, ಇದರ ಅಂಗವಾಗಿ ಸ್ವಲ್ಪವೂ ಹಿಂಜರಿಯಲಿಲ್ಲ. ಎಲ್ಲಾ ಲೌಕಿಕ ಅಭದ್ರತೆಗಳಿದ್ದರೂ ವಿಜಯ ಅವರ ಪರವೇ ವಾಲಿತು. ಮೇಲಿನಿಂದ ಮೇಲೆ ಡೂಯಿಯ ಸಮರ್ಥಕರು ಹಿಂದೇಟು ಹಾಕುವ ಘಟನೆಗಳು ಬಂದವು ಮತ್ತು ಅವನ ಸಂಪತ್ತು, ದೈಹಿಕ ಹಾಗೂ ಬೌದ್ಧಿಕ ಸಾಮರ್ಥ್ಯಗಳು ನಶಿಸಿ ಹೋಯಿತು. ಕೊನೆಗೆ ಅವನ ಅಂತ್ಯವಾಯಿತು. ಅದನ್ನು ಯು.ಎಸ್ ಮಾಧ್ಯಮದವರು ವಿಷಾದಕ ಪರಿಣಾಮ ಎಂದರು. ಖಂಡಿತವಾಗಿಯೂ ಆ ಸಮಯದ ಯು.ಎಸ್ ಮಾಧ್ಯಮವು ಪ್ರಶಂಸೆಗೆ ಅರ್ಹವಾಗಿದೆ. ಅವರು ಯಾವ ಪ್ರಮಾಣಿಕತೆಯಿಂದ ವರದಿ ಸಲ್ಲಿಸಿದರೆಂದರೆ, ಉದಾಹರಣೆಗೆ ಒಂದು ಸುಪ್ರಸಿದ್ಧ Bostom Herald ಪತ್ರಿಕೆ ಹೀಗೆ ಶೀರ್ಷಿಕೆ ಬರೆದನು: “great is Mirza Ghulam Ahmed-theMissiah”.

ಹುಝೂರೆ ಅನ್ವರ್(ಅಬಿಅ) ಹೇಳಿದರು. ಸಂಕ್ಷಿಪ್ತವಾಗಿ ಹೇಳುವುದಾದರೆ ಅಹ್ಮದಿಯಾ ಜಮಾಅತಿನ ಸ್ಥಾಪಕರು ಎಂದೂ ಸಹ ತಮ್ಮ ಭಾವನೆಗಳನ್ನು ಮತ್ತು ಅಧಿಕಾರ ಹೇರುವ ಪ್ರಯತ್ನ ಮಾಡಲಿಲ್ಲ. ಅಲ್ಲದೇ ಡೂಯಿ ಅಥವ ಯಾವನೇ ಒಬ್ಬ ಮುಸ್ಲಿಂ ವಿರೋಧಿಯನ್ನು ದ್ವೇಷದಿಂದ ಬಲಪ್ರಯೋಗದಿಂದ ದಮನಿಸಲು ಯೋಚಿಸಲಿಲ್ಲ. ಇದು ಅಹ್ಮದಿ ಮುಸಲ್ಮಾನರಿಗೆ ಜಮಾಅತಿನ ಸ್ಥಾಪಕರ ಸತ್ಯತೆಯ ಒಂದು ದೃಷ್ಟಾಂತವಾಗಿದೆ. ಈ ಹಿನ್ನಲೆಯಲ್ಲಿ ಝಾಯಿನ್ ನಗರವು ಒಂದು ವಿಶೇಷ ಮಹತ್ವ ಹೊಂದಿರುತ್ತದೆ. ಸಮಯದ ಅಭಾವದಿಂದ ಇನ್ನಷ್ಟು ಹೆಚ್ಚು ಹೇಳಲಾರೆ. ಈ ಮುಬಹಲ ಕುರಿತಾಗಿ ಮಸೀದಿಯಲ್ಲಿ ವಸ್ತು ಪ್ರದರ್ಶನ ಆಯೋಜಿಸಲಾಗಿದೆ. ಇದರ ಅಂಗವಾಗಿ ಹೆಚ್ಚು ತಿಳಿಯಬಯಸುವುದಾದರೆ ಈ ವಸ್ತು ಪ್ರದರ್ಶನದಿಂದ ಪ್ರಯೋಜನ ಪಡೆಯಬಹುದು ಅಥವಾ ನೀವು ಈ ಮೊದಲು ವಸ್ತು ಪ್ರದರ್ಶನ ನೋಡಿದ ಸಾಧ್ಯತೆಯಿರಬಹುದು.

ಹುಝೂರೆ ಅನ್ವರ್(ಅತಬಿಅ) ಹೇಳಿದರು: ಅಂದಹಾಗೆ ನಾನು ಹೇಳಬಯಸುತ್ತೇನೆ. ಇಂದು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ವಾಗ್ದತ್ತ ಮಸೀಹ ಹಾಗೂ ವಾಗ್ದತ್ತ ಮಹಮದ್ ಅವರ

*(ಪುಟ ಸಂಖ್ಯೆ-11ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ**
**ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.